ಯಕ್ಷಗಾನ ಕಲಾಕ್ಷೇತ್ರದಲ್ಲಿ ಶ್ರೀಮಾನ್ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರು ಚಿರಪರಿಚಿತರು. ಹೆಸರಾಂತ ಅರ್ಥಧಾರಿಯಾಗಿ, ನಟರಾಗಿ, ಪ್ರಸಂಗ ಕರ್ತರಾಗಿ, ಕಾದಂಬರಿಕಾರರಾಗಿ ಶ್ರೀಯುತರು ಸಾಮಾನ್ಯ ಐದು ದಶಕಗಳಿಂದ ಸಾಹಿತ್ಯ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಯುತ ವಿಷ್ಣು ಭಟ್ಟರ ಪ್ರಸಂಗಗಳೆಲ್ಲವೂ ಪ್ರದರ್ಶನ ಯೋಗ್ಯವೂ ಪ್ರತಿಭಾಪೂರ್ಣವೂ ಆಗಿವೆ. ಸಮರ್ಥ ಅರ್ಥಧಾರಿಗೆ ಅರ್ಥ ವಿವರಣೆಗೆ ಸಾಕಷ್ಟು ವಿಷಯಗಳು ಪದ್ಯಗಳಲ್ಲೇ ಅಡಕವಾಗಿವೆ.

ಯಾವುದೇ ಅರ್ಥವಾದರೂ ಕವಿ ಹೃದಯವನ್ನು ಅರಿತು ಸರಳ ಶೈಲಿಯಲ್ಲಿ ಅರ್ಥ ವಿವರಿಸುವುದು ಮಾಸ್ತರರ ವೈಶಿಷ್ಟ್ಯ. ಶ್ರೀಯುತರ ಅರ್ಥ ವಿವರಣೆಯಲ್ಲಿ ಪದ್ಯಗಳ ಪದ ಪದಗಳೂ ಜೀವಂತವಾಗುತ್ತವೆ. ಕವಿಯ ಅಂತರಂಗ ಸ್ಫೂರ್ತಿ ಪುಟಿದೇಳುತ್ತದೆ; ಪಾತ್ರದ ಪರಿಪೂರ್ಣತೆ ವ್ಯಕ್ತವಾಗುತ್ತದೆ.

—ಪ್ರಕಾಶಕರು.

ಯಕ್ಷಗಾನ

# ಅಮೋಘವರ್ಷ ನೃಪತುಂಗ

**ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್**

**ಶ್ರೀ ಗೋಪಾಲಕೃಷ್ಣ ಪ್ರಕಾಶನ, ದೇಲಂಪಾಡಿ**
ಕಾಸರಗೋಡು ತಾಲೂಕು.

Scanned by CamScanner

**ಅಮೋಘವರ್ಷ ನೃಪತುಂಗ** – ಯಕ್ಷಗಾನ ಪ್ರಸಂಗ


ಕೃತಿಕರ್ತ :

**ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್,**

ನಿಸರ್ಗ ಕಲಾ ನಿಲಯ,

ಗುಡ್ಡಡ್ಕ, ಸುಳ್ಯ, ದ. ಕನ್ನಡ



ಮುದ್ರಣ :

ಅಕ್ಟೋಬರ 1980



ಹಕ್ಕುಗಳು ಲೇಖಕರದ್ದು.



ಮುದ್ರಕರು :

ಸಂತೋಷ ಪ್ರಿಂಟರ್ಸ್, ಪುತ್ತೂರು, ದ. ಕ.

**ಬೆಲೆ ರೂ. 4 - 00**


॥ ಓಂ ಗಣಪತಯೇ ನಮಃ ॥

**॥ ಶ್ರೀ ಗೋಪಾಲಕೃಷ್ಣಾಯ ನಮಃ ॥**

# ಯಕ್ಷಗಾನ

# “ಅಮೋಘವರ್ಷ ನೃಪತುಂಗ”

॥ ಶಾರ್ದೂಲ ವಿಕ್ರೀಡಿತ ॥

ಶ್ರೀಕೃಷ್ಣಂ ಕರುಣಾಕರಂ ಮುರಹರಂ । ಮೂಲೋಕ ವಂದ್ಯಂ ಹರಿಂ ।
ಲೋಕೇಶಾದಿ ಸಮಸ್ತ ದೇವ ನಮಿತಂ ॥ ನಾರಾಯಣಂ ಕೇಶವಂ ॥
ನಾಕೇಶಾರ್ಚಿತ ದಿವ್ಯ ಪಾದ ಪದುಮಂ । ಕಾಕೋದರಾರಿ ಧ್ವಜಂ ॥
ಲೋಕಾನಂದ ವಿನೋದ ವಿಶ್ವ ವಿಜಯಂ । ಗೋಪಾಲಕೃಷ್ಣಂಭಜೇ ॥ ೧ ॥

॥ ರಾಗ ನಾಟ ರೂಪಕ ತಾಳ ॥

ಶ್ರೀ ಗಣನಾಥ ಕೃಪಾಕರ । ನಾಗಾನನಲಂಬೋದರ । ಯೋಗಿಜನಾರ್ಚಿತ ಶುಭಕರ । ಯೋಗಿನಿವರ ಚದುರ ॥ ೧ ॥ ಗಿರಿಜಾನಂದನ ನತಜನ । ವರದ ವಿನೂತನ ಘನಗುಣ । ಶರಧಿ ಸಮಾನ ವಿವೇಚನ । ಕರಶ್ರೀಸಂಪನ್ನಾ ॥ ೨ ॥ ಸದಮಲರೂಪ ಶುಭೋದಯ । ಸದಯಮಹಾ ಮಹಿಮಾಮಯ । ಪದಕಭಿವಂದಿಪೆ ಜಯ ಜಯ । ಮಧುಪುರ ಸ್ಥಿರನಿಲಯ ॥ ೩ ॥

॥ ಭಾಮಿನಿ ॥

ಭಾರತಿಗೆ ಬಲ ಬಂದು ವಂದಿಸಿ । ಮಾರುತಿಯ ಕೊಂಡಾಡಿ ಮಂಗಲ ಮೂರುತಿಯ ಪಶುಪತಿಯ ಪ್ರಾರ್ಥಿಸಿ ಪಾರ್ವತಿಗೆ ಮಣಿದೂ । ನಾರದಾದ್ಯರ ನೆನೆದು ನಮಿಸಿ ಮ] ಯೂರ ವಾಹನ ಗುಹನ ಕೀರ್ತಿಸಿ । ಶ್ರೀರಮಣ ಮುನಿಪುರದ ಹರಿದಯದಿಂದ ಕೃತಿಗೈವೇ ॥ ೧ ॥

॥ ರಾಗ ಸೌರಾಷ್ಟ್ರ ತ್ರಿವುಡೆ ತಾಳ ॥

ಕಿರಿಗಹನದಾಚಾರ್ಯ ವಿಷ್ಣುವಿ । ಗೆರಗಿ ಶಿಷ್ಯರು ಕನ್ನಡದನರ । ವರರಚರಿತವ ನರುಹಬೇಕೆಂ । ದೊರೆಯಲಾಗ ॥ ೧ ॥ ತಕ್ಕ ಮಾತೆಂದಧಿಕ ಹರುಷದಿ । ಚಕ್ರವರ್ತಿ ಪ್ರಭೂತ ವರ್ಷನ । ಶಕ್ತ ಪುತ್ರ ಅಮೋಘ ವರ್ಷನ । ದಕ್ಕೆ ಚರಿತೇ ॥ ೨ ॥ ಕನ್ನಡದ ನೃಪತುಂಗನವ ಸ । ಾಮ್ರಾನ್ಯ ಸಾಮ್ರಾಟನು ಮಹೋನ್ನತ । ಮಾನ್ಯ ಖೇಟದೊಳಾಳುತಿರ್ದ ನ । ದನ್ನೆ ಪೇಳ್ವೇ ॥ ೩ ॥

॥ ರಾಗ ಭೈರವಿ ಝಂಪೆ ತಾಳ ॥

ಒಂದು ದಿನ ನೃಪತುಂಗ ] ನಂದದಿಂದೋಲಗದಿ । ವಂದ್ಯ ಪೀಠವ ನೇರು । ತೆಂದ ಮಂತ್ರಿಯೊಳು ॥ ೧ ॥ ಪಾತಾಳ ಮಲ್ಲರೇ । ಭೂತಳವನಿದು ವರೆಗೆ । ನೀತಿ ಧರ್ಮದೊಳಾಳಿ । ಖ್ಯಾತಿಗಳಿಸಿದೆವು ॥ ೨ ॥ ನಿಮ್ಮಂಥ ಸಚಿವರಿಹು । ದೆಮ್ಮ ಸೌಭಾಗ್ಯವದು । ಧರ್ಮಗುರು ಜಿನಸೇನ । ಶರ್ಮ ಶ್ರೀ ವಿಜಯಾ ॥ ೩ ॥ ಅವರಿಪ್ಪುದೀ ಸಭಾ । ಭವನಕೇ ಭೂಷಣವು । ಬವರಜಿತ ಬಂಕೇಶ । ನವಕಾರ್ಯ ದಕ್ಷ ॥ ೪ ॥ ಸೇನಾಧಿಪನು ನಮಗೆ । ಪ್ರಾಣ ಬೆಂಬಲನವನ । ಸೂನುಲೋಕಾದಿತ್ಯ । ತಾನೆ ಸಮರ ಪಟೂ ॥ ೫ ॥ ಸತಿಶಿರೋಮಣಿ ಲಕ್ಷ್ಮಿ । ಪತಿ ಪರಾಯಣಿ ಸಾಧ್ವಿ । ಸುತ ಕೃಷ್ಣನೊಬ್ಬನದೆ । ವ್ಯಥೆಯೀಗ ನಮಗೇ ॥ ೬ ॥ ನಂದನೆಯರಾಶಂಖಾ । ಚಂದ್ರಲೆಯರಿಂದ ಗೃಹ । ಚಂದವೇಹಿರಿಯಳಿಯ । ನಂದಿವರ್ಮ ಕಲೀ ॥ ೭ ॥



॥ ಭಾಮಿನಿ ॥

ಅಷ್ಟ ಸೌಭಾಗ್ಯಗಳು ತುಂಬಿ ಪ್ರ । ತಿಷ್ಠೆಯಿಂದಾವಿಪ್ಪೆವಾದರ । ದೃಷ್ಟವೆಂತೋ ಮುಂದೆ ನಮ್ಮ । ಪಟ್ಟವೇರ್ವವನೂ ॥ ಶ್ರೇಷ್ಠನಿರಬೇಕೆಂಬ ಹಂಬಲ । ಹುಟ್ಟಿದೋರ್ವನೆ ಸುತನ ನಡತೆಯ । ದುಷ್ಟತನದಿಂದೆಂತುಸಲುವುದೊ ಎಂದಡವನೊರೆದಾ ॥ ೧ ॥

॥ ರಾಗ ಕಾಂಭೋಜ ಅಷ್ಟ ತಾಳ ॥

ಸ್ವಾಮಿ ಸಾಮ್ರಾಟರೆ ತಮ್ಮಾ । ಸತ್ವ । ಸಾಮರ್ಥ್ಯ ಸತ್ಯ ಸದ್ಧರ್ಮಾ । ಸಾಮಾನ್ಯವೇ ಕೀರ್ತಿ । ಭೂಮಿಯಿಂ ಪಾತಾಳ । ವ್ಯೋಮದ ವರೆಗೇರಿ । ತೈ ಮಹಾಮಹಿಮರೆ ॥ ೧ ॥ ಪೂರ್ವ ಚಾಲುಕ್ಯರ ಜೈಸೀ । ಮತ್ತಾ । ಹೋರ್ವ ಗಂಗಾದ್ಯರೊಳ್ಸೆಣಸೀ । ಸಾರ್ವತ್ರಿಕವು ಜಯ । ಸಾರ್ವಭೌಮತ್ವವ ] ಸಾರ್ವಂತೆ ಗೈದುದು । ಸರ್ವ ಸಾಮಾನ್ಯವೆ ॥ ೨ ॥ ಗೋವಿಂದ ರಾಜರ ಕೀರ್ತಿ । ಗೋ । ದಾವರಿಯಿಂದ ಸಂಪೂರ್ತಿ । ಕಾವೇರಿ ಪರಿಯಂತ । ಆವರಿಸುವ ಹಂತ । ತಾವೇರಿಸಿದ ಸ್ವಂತ । ಠೀವಿಯ ಧೀಮಂತ ॥ ೩ ॥ ಅಂತೆಯೆ ತಮ್ಮ ನಂದನನೂ । ಬಲ । ವಂತನೆಂದನ್ನಿಸದಿರನೂ । ಚಿಂತೆಯೇಕದಕೀಗ । ಲಂತೂ ಚಿಕ್ಕವಯೋಗ । ವೆಂಥದ್ದೆಂಬುದನಾಗ । ಗೊಂತಕ್ಕು ಶುಭಭಾಗ ॥ ೪ ॥ ಗುರುಗಳಿಂದಾದಿ ನಾವೆಲ್ಲಾ । ತಿದ್ದಿ । ದರೆ ಸರಿಬಹನವನು ಲ್ಲಾ । ಕಿರಿಯ ಪ್ರಾಯದೊಳಿಪ್ಪ । ಪರಿಪರಿಯಿಂಬಪ್ಪ । ಕಿರಿಕಿರಿಗಳತಪ್ಪ । ಮರೆತರುತ್ತಮನಪ್ಪ । ೫ ॥

॥ ಭಾಮಿನಿ ॥

ಮಂತ್ರಿ ಶೇಖರನಿಂತು ನಾನಾ । ತಂತ್ರದಿಂಬೋಧಿಸುತ ನೃಪತಿಯ । ಶಾಂತಗೊಳಿಸಲ್ಕತ್ತ ಕನ್ಯಾ ಕುಬ್ಜ ಪುರದರಸ । ಕ್ರಾಂತಿಕಾರಕಮಿಹಿರ ಭೋಜಮ । ಹಾಂತ ಬಲನೋಲಗವನೀಯುತ । ಲಂತರಂಗವ ಸಚಿವ ಸೇನಾನಾಥರೊಡನೆಂದಾ ॥ ೧ ॥

|| ರಾಗ ಸೌರಾಷ್ಟ್ರ ತ್ರಿವುಡೆ ತಾಳ ||

ಮಂತ್ರಿ ಸೇನಾಪತಿಗಳಾಲಿಪು । ದಿಂಥ ವಿಭವೋತ್ಸವದ ಸಭೆ ಭೂ ।
ಕಾಂತರೊಳಗಿನ್ನಾರಿ ಗಿಹುದೆ । ಮ್ಮಂತೆ ಜಗದೀ । ೧ ॥ ಅಷ್ಟ ಸೌಭಾಗ್ಯ
ದೊಳು ನಮ್ಮೊ । ಪಟ್ಟಣಕ್ಕೆಣೆಯುಂಟೆ ಸಾಹಸ । ದಿಟ್ಟತನದ ಪ್ರತಿಷ್ಟೆಗೂ
ನಾವ್ । ಶ್ರೇಷ್ಟರಿಹೆವೂ ॥ ೨ ॥ ಆದರಿನ್ನೂ ಮಾನ್ಯ ಖೇಟಪು । ರಾಧಿಪನ
ಮಾಂಡಲಿಕರೆಂಬುದು । ಖೇದಕರವಿದು ವೀರ ಕ್ಷತ್ರಿಯ । ಯೋಧರಿದ್ದೂ
॥ ೩ ॥ ಕಪ್ಪಕಾಣಿಕೆ ಕೊಟ್ಟು ಮಣಿವುದು । ತಪ್ಪು ಕೆಲಸವಿದೈಸೆ ಮುಂದಕೆ।
ಬಪ್ಪುದೆಲ್ಲವು ಬರಲಿ ತೋರುವ । ದರ್ಪ ಸಹಸ ॥ ೪ ॥ ಅದರಿನಿಂದೀಕ್ಷ
ಣದಿ ನಾವೇ । ಕೆದಕಲೇಳ್ಬದೆ ಕಾರ್ಯಲಾಟದ । ಮೊದಲಗಡಿ ದಾಟುತಲೆ
ಕರೆವುದು । ಕದನ ಕವನಾ ॥ ೫ ॥ ಹಿಂದಿನಂತಲ್ಲೆಮ್ಮ ಪೌರುಷ । ವೆಂದು
ಮನಗಾಣಿಸುತ ಗೆಲಬೇ । ಕಿಂದೆ ಪೊರಡುವುದೊಳಿತು ನಿಮಗೂ । ಚಂದ
ವಷ್ಟೇ ॥ ೬ ॥

|| ರಾಗ ಭೈರವಿ ಅಷ್ಟ ತಾಳ ||

ಅದಕೆಂದ ಮಂತ್ರೀಶ್ವರಾ । ಗುಣಶೇಖರ । ಪದಕಭಿನಮಿಸಿಧುರ ।
ಕದನಕಲಿಗಳಿಗೆ । ಸುಧೆಕುಡಿದಂತೆ ನಾ । ವಧಟುಳ್ಳ ಭಟರಲ್ಲವೇ ॥ ೧ ॥
ಮಾನ್ಯ ಖೇಟಾಧೀಶನಾ । ಸಾಮರ್ಥ್ಯ ಸಾ । ಮಾನ್ಯವಲ್ಲಾದರು ನಾ । ಗಣ್ಯ
ವಿಡೆನು ನಮ್ಮ । ಸೈನ್ಯ ಮುಂದ್ವರಿವುದೆ । ಪುಣ್ಯದ ಕಾರ್ಯವದೂ ॥ ೨ ॥

|| ರಾಗ ಭೈರವಿ ಏಕ ತಾಳ ||

ಸೇನಾಧಿಪ ಮಕರಂದಾ । ಸು । ತ್ರಾಣದಿ ಘರ್ಜಿಸುತೆಂದಾ । ಆನರ
ಪತಿ ನೃಪತುಂಗಾ । ತಾ । ಕಾಣಲಿ ಶಕ್ತಿ ಪ್ರಸಂಗಾ ॥ ೧ ॥ ಅಪ್ಪಣೆ ಪಾಲಿಸಿ
ಕ್ಷಣದೀ । ಬಡಿ । ದಪ್ಪಳಿಸುವೆ ರಣ ಕಣದೀ । ಕ್ಷಿಪ್ರದಿ ಬಲ ಸಹ ಸಾರ್ವ।
ಜಗ । ವೊಪ್ಪುವ ಜಯುವನೆ ಸಾರ್ವ ॥ ೨ ॥



|| ರಾಗ ಕಾಂಬೋಧಿ ಝಂಪೆ ತಾಳ ||

ಭಲರೆ ಭಾಪುರೆ ನಿಮ್ಮ । ಬಲವಂತಿಕೆಯೆ ನಮ್ಮ । ಬಲುಪಾಲು
ಸಾಮರ್ಥ್ಯ ನಿಧಿಯೂ । ಬಲ ಸಹಿತ ಸಂಗ್ರಾಮ । ಕಲಿತನಕೆ ಭೂವ್ಯೋಮ ।
ಬೆಲೆಯಿತ್ತರದು ಮಪೋಸ ವಿಧಿಯೂ ॥ ೧ ॥ ಎಂದೆನುತ ಬಲಸಹಿತ । ಮುಂ
ದುವರಿಯುತ ವಿಹಿತ । ವೆಂದಿರ್ದ ಲಾಟ ಗಡಿದಾಟೀ । ಬಂದುದೀಕ್ಷಿಸಿ
ದೂತ । ನೊಂದೋಡಿದನುದಾತ । ಗೆಂದ ಪೆನೆನುತ್ತ ಭಯ ಹುಟ್ಟಿ ॥ ೨ ॥

|| ಕಂದ ಪದ್ಯ ||

ಇತ್ತಲ್ ಚಾರಕ ನೋಡಲ್ । ಅತ್ತಲ್ತಲವನ ಪುರಾಧಿಪತಿ ಗಂ
ಗೇಶಂ । ವಾರ್ತೆಯನರಿತೋಲಗದೊಳ್ । ಬಿತ್ತರಿಸಿದ ಸಚಿವ ಮುಖ್ಯರೊ
ಡನೀತೆರದೊಳ್ ॥ ೧ ॥

|| ರಾಗ ತೋಡಿ ರೂಪಕ ತಾಳ ||

ಇತ್ತಕೇಳಿ ಮಂತ್ರಿ ಮುಖ್ಯರೂ । ಗೂಢಚಾರ । ರಿತ್ತ ವಾರ್ತೆಯನ್ನು
ಸರ್ವರೂ । ಉತ್ತರದಲಿ ಮಿಹಿರ ಭೋಜ । ನತ್ತಲಾಟ ದೇಶ ಗಡಿಯ ।
ನೊತ್ತಿ ದಂಗೆಯೆದ್ದನಂತೆ । ಚಿತ್ತವಿಟ್ಟು ಗಮನಿಸುವುದು ॥ ೧ ॥ ವಿಕ್ರಮ
ದಲಿ ಯುದ್ಧ ಸಾರಿದಾ । ಮಾನ್ಯ ಖೇಟ । ಚಕ್ರವರ್ತಿ ಯಾಜ್ಞೆ ಮೀರಿದಾ।
ತಕ್ಕ ಸಮಯುವಿದುವೆ ನಾವು । ದಕ್ಷಿಣದಲಿ ಧಾಳಿಯಿಡಲು । ತಕ್ಷಣದಲಿ
ಪೊರಡೆ ಕಾರ್ಯ । ದಕ್ಷರಾದರೆಮಗೆ ಗೆಲುವು ॥ ೨ ॥ ಗಂಗ ಕುಲದ ಕೀರ್ತಿ
ಯುಳಿಸಲೂ । ಅಮೋಘವರ್ಷ । ಗಂಗಶಕ್ತಿಯರಿವುಗೊಳಿಸಲೂ । ಸಂಗ
ರಕ್ಕೇ ಹಿಂಗಲೇಕು । ತ್ತುಂಗ ಸಹಸರಹುದು ನಾವು । ಸಂಘರ್ಷ ಕ್ರಾಂತಿಗಿ
ಳಿಯೆ ನಿಂ । ಮ್ಮಂಘವಣೆಯ ವಿಶದಗೊಳಿಸಿ ॥ ೩ ॥

|| ರಾಗ ಭೈರವಿ ಏಕತಾಳ ||

ಮಂತ್ರೀಶ್ವರ ಮತಿವಂತಾ । ತಾ । ನಿಂತರುಹಿದ ನಹುದಿಂಥಾ ।
ಸ್ವಂತಿಕೆ ಸಹಸದ ಕಾರ್ಯ । ಭೂ । ಕಾಂತನು ಕಾಣಲಿ ಶೌರ್ಯ ॥ ೧ ॥



Scanned by CamScanner

ಸಾಮರ್ಥ್ಯದಿ ನೃಪತುಂಗಾ । ನಿ । ಸ್ಸೀಮನೆ ಸರಿಯೀಗಂಗಾ ಸೀಮೆಯು ಮಣ್ಣಿನ ಗುಣವಾ । ಕಾಂ । ಬಂಗಕೆ ಮಾಡುವರಣವಾ ॥ ೨ ॥

॥ ರಾಗ ಭೈರವಿ ಅಷ್ಟತಾಳ ॥

ಸರಿ ಸರಿ ಸರಿಯೆಂದನೂ । ಸೇನಾಧಿ ಪ । ಪರಮೇಶ ರಣ ಮಲ್ಲನೂ । ಶರಣೆಂದು ನಾವಿದು । ವರೆಗೆ ಕಪ್ಪವ ನಿತ್ತಾ । ದೊರೆ ಚಕ್ರವರ್ತಿಯಾದ ॥೧॥ ಹೊಸ ಕಾಲ ಬಂತೆಂಬುದಾ । ಕಾಣಿಸೆ ಯುದ್ಧ । ವೆಸಗಿ ಸ್ವತಂತ್ರವಾದಾ । ರಸೆ ನಮ್ಮದೆಂಬುದ । ದೆಸೆ ದೆಸೆಗರುಹೆ ಸಂ । ತಸ ಕಾರ್ಯ ಜಯವಪ್ಪು ದೂ॥ ೨ ॥

॥ ಭಾಮಿತಿ ॥

ನಡುಗಿತೇನಿದು ಧರೆಯು ಮೇಘದ । ಗುಡುಗೊ ಸಾಗರವುಕ್ಕಿ ಮೇರೆ ಯು । ದಡವ ಬಡಿದಪ್ಪಳಿಸುವುದಬ್ಬರವೊ ತಿಳಿಯೇ । ಧೃಢವಿದೇನೆಂದರಿಯ ದೆಲ್ಲರು । ಚಡಪಡಿಸೆ ಕರವಾಳ ತಿರುಹುತ । ಘುಡುಘುಡಿಸಿ ಭೂತುಂಗ ಸಮರೋತುಂಗ ನಿಂತೆಂದಾ ॥ ೧ ॥

॥ ರಾಗ ಮೋರವಿ ಏಕತಾಳ ॥

ತಾತನವರೆ ಸರಿ ಮಾತಿದು ನಾವ್ನಿ । ಭೀರ್ತರು ಸಹಸಿಗಳೂ । ಈತೆ ರನಿದ್ದಾ । ಭೂತಳ ಪಾಲಗೆ । ಸೋತುದೆ ಬಲುಕೀಳೂ ॥ ೧ ॥ ಹಂಗೇನಾ ನೃಪ । ತುಂಗನೆನಲು ನರ । ಸಿಂಗನೆ ನಡುಗುವರೇ । ಸಂಗತಿ ಬಿಡಿ ಸಮ । ರಾಂಗಣ ದೊಳಗವ । ನಂಗವ ಕೆಡಹದಿರೇ ॥ ೨ ॥ ಪಡೆಸಹಿತೀಕ್ಷ್ಣ । ಗಡಿ ದಾಟುತ ಮುಂ । ದಡಿಯಿಡಲಪ್ಪಣೆಯೂ । ಕೊಡಿ ಕೊಡಿ ತ್ರೈಜಗ । ನಡುಗ ಲಿರಿಪುಗಳ । ಮಡುಹಿ ಪಡವೆ ವಿಜಯಾ ॥ ೩ ॥



॥ ರಾಗ ಶಂಕರಾಭರಣ ತ್ರಿವುಡೆ ತಾಳ ॥

ಮಗನೆ ನಿನ್ನೀ ಸಾಹಸೋಕ್ತಿಯ । ಬಗೆಗೆ ಸಂತಸವಾಯಿತೂ । ಹಗೆ ಯವನು ಸಾಮಾನ್ಯನಲ್ಲಿದು । ಹಗುರವಲ್ಲಾ ॥ ೧ ॥ ಮಂತ್ರಿಸೇನಾಪತಿಗಳೇ ನಿ । ಮ್ಮಂಥ ಸಹಸಿಗಳಿಪ್ಪುದೂ । ಎಂಥ ಪುಣ್ಯವು ನಮ್ಮ ರಾಷ್ಟ್ರಕೆ । ಚಿಂತೆ ಯಿಲ್ಲಾ ॥ ೨ ॥ ಬನ್ನಿನೀವೆಲ್ಲವರು ಎನ್ನಯ । ಬೆನ್ನಬೆಂಬಲವಾಗಿರೀ । ಉ ನ್ನತದ ಬಲಸಹಿತ ಸಾಗುವ । ನಿರ್ಣಯವಿದೇ ॥ ೩॥

॥ ಕಂದ ಪದ್ಯ ॥

ಇತ್ತಲು ಧುರಕವರ್ಸೈದಲು । ಅತ್ತಲು ಭಯದಿಂ ನಡ ನಡುಗುತ್ತೋ ಡುತ್ತಂ । ಉತ್ತರ ಭಾಗದ ಚರನುಂ । ಪೃಥ್ವಿಪ ನೃಪತುಂಗಗಂ ಮಣಿಯು ತಲೆ ಪೇಳ್ದಂ ॥ ೧ ॥

॥ ರಾಗ ಮುಖಾರಿ ಏಕತಾಳ ॥

ಸ್ವಾಮಿ ನಮೋ ನಮೋ ಎಂಬೆ ಪರಾಕೂ ॥ ಲಾಲಿಸಬೇಕೂ । ಸ್ವಾಮಿ ನಮೋ ನಮೋ ಎಂಬೆ ಪರಾಕೂ । ನೇಮದೊಳುತ್ತರ । ಸೀಮೆಯಗಡಿ ಬಳಿ । ಯೇಮನವಿಟ್ಟಾ । ರಾಮದೊಳಿದ್ದು ವಿ । ರಾಮವಿರದೆ ಶ್ರ । ದ್ಧಾಮನ ದಿಂದೀ । ಪಾಮರ ನಿರುತಿರೆ । ರಾಮ ರಾಮೂ ಹರೇ ॥ ಸ್ವಾಮಿ ॥ ೧ ॥ ಏನೆಂದು ಪೇಳಲಿಜೀಯೂ ನಾಮುಂದೇ । ಇಂತಾಗಿಲ್ಲ ಹಿಂದೆ । ಭೂನಭ ಪಾ ತಾಳ ನಡುಗಿತಲ್ಲಾ ತಂದೇ । ಸೇನಾ ಸಾಗರ । ವೇನುಗ್ಗಿತು ಗಡಿ । ಠಾಣೆಯೆ ಪುಡಿ ಪುಡಿ । ತ್ರಾಣದಿ ನಿಲೆ ಬಡಿ । ದೇನೋ ನಡಿ ನಡಿ । ಪ್ರಾಣವಿರಲಿ ತಡಿ । ನೀ ನೊಡೆಯಗೆ ನುಡಿ । ಕಾಣುವೆವವನಡಿ ॥ ಸ್ವಾಮಿ ॥ ೨ ॥ ಎಂದೆನ್ನ ನ್ನೋಡಿಸಲಾನಿತ್ತ ಬಂದೇ । ನೋಡದೆ ಹಿಂದೇ । ಕಂದೆರದರೆ ಕಾಂಬುದಾ ದೃಶ್ಯ ಮುಂದೇ । ಎಂದೆಂದಿಗು ನೆನ । ಪಿಂಗಳಿಯದ ಜನ । ಹಂದೆ ಮಿಹಿರ ಭೋ । ಜಂದೇ ನಬ್ಬರ । ದೊಂದಿಗೆ ಸೈನಿಕ । ವೃಂದದ ಠೀಕ । ನೊಂದನೆ ಮಿಕ ಮಿಕ । ನಿಂದೇ ನೋಡಿದೆ ॥ ಸ್ವಾಮಿ ॥ ೩ ॥



Scanned by CamScanner

॥ ಕಂದ ಪದ್ಯ ॥

ಆಲಿಸುತೆಲ್ಲವನಾ ಭೂ । ಪಾಲ್ರಿಂದೂತಂ ಗಭಯುವ ನೀಯಲ್ಕಾಗಂ ॥ ಪಾಳೆಯು ಬಂತೋ ಬಂತೆಂ । ದೇಳುತಬೀಳುತಲೆಯೋರ್ವಚರ ಬಂದೆಂದಂ ॥ ೧ ॥

॥ ರಾಗ ಸಾರಂಗ ಅಷ್ಟತಾಳ ॥

ಬಂತಲ್ಲ ದಂಡು ಸ್ವಾಮಿೊ । ನಮೂಮಿೊ । ಬಂತಲ್ಲ ದಂಡು ಸ್ವಾಮಿೊ । ಬಂತಲ್ಲ ದಕ್ಷಿಣ । ಪ್ರಾಂತ್ಯದ ಗಡಿದಾಟಿ । ಪಂಥ ಪೌರುಷದಿ ಮ । ಹಾಂತ ಸಮೂಹವೆ ॥ ಬಂತಲ್ಲದಂಡು ॥ ೧ ॥ ಗಂಗೇಶ ನೀತಿ ಮಾರ್ಗ । ದಾಟಿದ ದುರ್ಗ । ದಂಗೆಯೆದ್ದೆಲ್ಲ ಮಾರ್ಗ । ಭಂಗಗೊಳಿಸಿಧ । ರ್ಮಾಂಗವ ಬಿಟ್ಟುರ । ಣಾಂಗಕಿಳಿದ ಪ್ರ । ಸಂಗವಿದಾಯಿತು ॥ ಬಂತಲ್ಲ ದಂಡು ॥ ೨ ॥

॥ ಭಾಮಿನಿ ॥

ಇಂತೆನುವ ದೂತನನು ಮನ್ನಿಸಿ । ಚಿಂತಿಸದಿರೆಂದಭಯವಿತ್ತುಮ । ಹಾಂತ ಬಲ ಸಾಮ್ರಾಟ ನೃಪತುಂಗಾಖ್ಯಯೋಚಿಸುತಾ । ಬಂತಿದೇನಿಂದು ಭಯ ನೃಪಸಾ । ಮಂತರಿಂಗೀ ಧೈರ್ಯವರರೇ । ಭ್ರಾಂತರಿಗೆ ಕಡೆಗಾಲ ಕಾಣೆಪೆನೆನುತ ಸಭೆಗೆಂದಾ ॥ ೧ ॥

॥ ರಾಗ ಕೇದಾರ ಗೌಳ ಝಂಪೆ ತಾಳ ॥

ಮಂತ್ರಿಸೇನಾಪತಿಗಳೇ । ಸಕಲ ಸಾ । ಮಂತ ನೃಪ ಕಡುಗಲಿಗಳೇ । ಬಂತಲ್ಲ ಬರಿದೆಯುದ್ಧಾ । ಎಂಬೊಂದು । ಚಿಂತೆ ಹೊರತೆಲ್ಲ ಸಿದ್ಧಾ ॥ ೧ ॥ ಹಿಂದೆ ನಮ್ಮೊಳು ಸೆಣಸುತಾ । ಸೋತುಶರ । ಣೆಂದು ಕಪ್ಪವ ನೀಯುತಾ ।



ನಿಂದವರಿಗೇಕೆ ಬವರಾ । ಹೊಸ ಶಕ್ತಿ । ಹೊಂದಿತೇ ತಿಳಿಯೆವಿವರಾ ॥ ೨ ॥ ಉಭಯ ದಿಕ್ಕಿನ ಸಮರವೂ । ನಮ್ಮಯಿೊ । ಪ್ರಬಲತೆಗೆ ಪರಿಪಾಠವೂ । ಪ್ರಭುಶಕ್ತಿಮೆರೆಸಬೇಕೂ । ನಿಮ್ಮಮನ । ದಭಿಲಾಶೆಯುಸುರಿ ಸಾಕೂ ॥ ೩ ॥

॥ ರಾಗ ಕೇದಾರಗೌಳ ಅಷ್ಟ ತಾಳ ॥

ಪಾತಾಳ ಮಲ್ಲತಾ । ನಾತತೂಕ್ಷ್ಣಣ ಪೇಳ್ದ । ಭೂತಳೇಶ್ವರರೆ ಕೇಳೀ । ಖ್ಯಾತಿ ಪಡೆದ ವೀರ । ವ್ರಾತವೆ ಮುಂದಿರ । ಲೇತರ ಚಿಂತೆ ಪೇಳೀ ॥ ೧ ॥ ಆದರು ಭಯಕಡೆ । ಗೈದಲಿರುವ ಪಡೆ । ಗೈದೆನುರಿತ ನಾಯಕಾ ॥ ಯೋಧ ರಾರೆಂಬುದೆ । ಪಾದನಾಥಾವೇಬ । ಹಾದಿ ಹಿಡಿವ ಸೇವಕಾ ॥ ೨ ॥ ವೃದ್ಧ ನಾದರು ಬಿಡೆ । ಯುದ್ಧಕೆ ಭಯಪಡೆ । ಸಿದ್ಧನಿಂದಾವುದಕ್ಕೂ । ಕ್ಷುದ್ರರ ವರು ದಂಗೆ । ಯೆದ್ದುದಕೊಮ್ಮೆಗೇ । ಬುದ್ಧಿಯ ಕಲಿಸಬೇಕೂ ॥ ೩ ॥ ಹಿಂದಿನಿಂದಲೆ ಗೋ । ವಿಂದ ರಾಜರ ಸೇವೆ । ಯಿಂದಿದ್ದ ದೇಹವಿದೂ । ಮಂದ ನೆಗೈದುದಿ । ದೊಂದೆ ಪೀಠಕೆ ನಿಷ್ಠೆ । ಯೆಂದೆಂದಿಗೂಯಿಹುದೂ ॥ ೪ ॥

॥ ರಾಗ ಭೈರವಿ ಅಷ್ಟತಾಳ ॥

ವೀರ ಬಂಕೇಶನೆಂದಾ । ಮಹಾಪ್ರಭೋ । ಈ ರಾಜಪೀಠವೊಂದಾ । ಆರಾಧಿಸುತನೇಮ । ಮೀರದೆ ವಿಕ್ರಮ । ತೋರಿದೆ ಬಿಡೆನೆಂದಿಗೂ ॥ ೧ ॥ ಪಾತಾಳಮಲ್ಲರಂತೇ । ಹಿಂದಿನ ಪ್ರಭು । ಪ್ರೀತಿಯ ಪಡೆದು ನಿಂತೇ । ಭೂ ತಳೇಶರ ತಮ್ಮ । ಮಾತಿಗೆ ಪ್ರತಿಯಾಡೆ । ಭೀತಿ ಪಡೆನು ಯುದ್ಧಕೇ ॥ ೨ ॥ ಪ್ರಭುಗಳಪ್ಪಣೆಯಿತ್ತರೇ । ತಕ್ಷಣದಲಿ । ಪ್ರಬಲರ ಕೂಡುತ್ತುರೇ । ಉ ಭಯ ದಿಕ್ಕಿಗು ಜಯ । ಪ್ರಭೆಯ ಪತಾಕೆಯ । ನಭಕೇರಿಸುವೆನು ಜೀಯೂ ॥ ೩ ॥

॥ ರಾಗ ಭೈರವಿ ಏಕತಾಳ ॥

ಅನಿತರೊಳಾತನತನಯೂ । ನುಡಿ । ದನು ಕಲಿಲೋಕಾದಿತ್ಯಾ । ಮ



Scanned by CamScanner

ಣಿವೆ ಮಹಾಪ್ರಭೊರಣಕೇ । ಅ । ಪ್ಪಣೆಯಾಗಲಿ ತಕ್ಷಣಕೇ ॥ ೧ ॥ ಯಾವುದೆ ದಿಕ್ಕಿಗೂ ಸಾಗೀ । ವೀ । ರಾವಳಿಪತಿತಾನಾಗೀ । ಭೂವರರಿಪುಗಳ ತರಿವೇ । ಜಯ । ದೇವಿಯ ಪಡೆದ್ಯೆತರುವೇ ॥ ೨ ॥ ಎನಲೇಳುತ ಚಾಲುಕ್ಯಾ । ರಣ । ಗಲಿಯಹ ವಿಜಯಾದಿತ್ಯಾ । ವಿನಯದೊಳೆಂದನು ನೃಪಗೇ । ಧುರ । ಕನುಮತಿ ಪಾಲಿಸಿರೆನಗೇ ॥ ೩ ॥ ಗಂಗ ಮಿಹಿರ ಭೋಜರಿಗೇ । ರಣ । ರಂಗಕೆ ಕೆಣಕಿದ ಬಗೆಗೇ । ಸಂಗರದಲಿ ಮದ್ದರವೇ । ತವ । ಸಂಗದರುಚಿ ತೋರಿಸುವೇ ॥ ೪ ॥

॥ ರಾಗ ಭೈರವಿ ಝಂಪೆ ತಾಳ ॥

ಎಂದಡನಿತರೊಳೆದ್ದು । ನಂದಿವರ್ಮನು ಪೇಳ್ದ । ವಂದಿಸುತ ಮಾವನೀ । ವಿಂದೆನ್ನಕಳುಹೀ ॥ ೧ ॥ ವಂಚಿಸುತಲೊಂದಾಗಿ । ಸಂಚು ಹೂಡುತಲೆದ್ದ । ಹಂಚಿಕೆಯ ಮುರಿಯಲೀ । ಕಾಂಚೀಶ ಸಾಕೂ ॥ ೨ ॥ ಪ್ರಳಯ ಭೈರವನಂತೆ । ಹಳಚುವೆನು ಪಲ್ಲವರ । ಬಲವಂತಿಕೆಯ ವಿವರ । ತಿಳಿಸುಗೀ ಬವರಾ ॥ ೩ ॥

॥ ಕಂದ ಪದ್ಯ ॥

ಇನಿತೋರೋರ್ವರು ಬವರ । ಕ್ಕಣಿಯಾಗುವ ಬಯಕೆಯಂನುಸುರುತಿರಲಾಗಂ । ಮಣಿದಾನೃಪಸುತ ಕೃಷ್ಣಂ । ಘನತರ ಪೌರುಷದಿ ಪೇಳ್ದ ಭೂವರನೊಡನೆಂ ॥ ೧ ॥

॥ ರಾಗ ಮಾರವಿ ಏಕತಾಳ ॥

ಬೊಪ್ಪನವರೆನೀ । ಪಪ್ಪಣೆ ಕೊಡಿರೆನ । ಗಪ್ಪಳಿಸುವೆನವರಾ । ತಪ್ಪೆನು ಮಾತಿಗೆ । ತಪ್ಪೆನು ಜಯ ತಿಳಿ ದಿಪ್ಪೆನು ರಣ ವಿವರಾ ॥ ೧ ॥ ಯಾವುದೆದಿಕ್ಕಿನ । ಸೇವೆಗು ಸಿದ್ಧನಾ । ನೇ ವೀಳಯ ಪಡೆವೇ । ತಾವಂತೇ ಸೇ । ನಾವಳಿ ಪಟ್ಟವ । ನೀವು ದಿದೋ ಮಣಿವೇ ॥ ೨ ॥

॥ ಭಾಮಿನಿ ॥

ಕೇಳುತದನೆಲ್ಲವನು ಮಾತಿನ । ಆಳತೂಕವ ತೂಗುತಾ ಭೂ । ಪಾಲ ಮನದೊಳೆ ಮಥಿಸಿ ತನ್ನೊಳೆ ನಿಶ್ಚಯಕೆ ಬಂದೂ ॥ ಓಲಗವ ನೀಕ್ಷಿಸುತ ಸರ್ವರು । ಕೇಳಿರೀಕಡೆಗೆಂದು ಕಿರುನಗೆ । ತಾಳಿ ಘನ ಗಂಭೀರ ವಾಣಿಯೊಳೆಂದ ನೊಲವಿಂದಾ ॥ ೧ ॥

॥ ರಾಗ ಮದ್ಯಮಾವತಿ ತ್ರಿವುಡೆ ತಾಳ ॥

ರಾಷ್ಟ್ರಕೂಟರ ಪುಣ್ಯ ಪೀಠಕೆ । ನಿಷ್ಠರಾದ ಮಹಾನುಭಾವರೆ । ತುಷ್ಟಿಯಾಯಿತು ಮನಕೆ ನಿಮ್ಮಿಯ । ಸ್ಪಷ್ಟವಾಣಿಯ ಕೇಳಿಯೇ । ಶ್ರೇಷ್ಠರಹುದೂ ॥ ೧ ॥ ತೀರ್ಥರೂಪರ ಕಾಲದಿಂವಲೆ । ಕೀರ್ತಿಯಿಂದಿ । ಮಂತ್ರಿಪದವಿಯ । ಹೊತ್ತರೀ ಪಾತಾಳ ಮಲ್ಲರು । ಸ್ವಾರ್ಥರಹಿತರು ಪೂಜ್ಯರೂ । ಸತ್ವಯುತರೂ ॥ ೨ ॥ ಆದರೀ ವೃದ್ಧಾಪ್ಯ ಕಾಲದಿ । ಕಾದಲವರನು ಕಳುಹಲಾರೆವು । ಬೋಧನಾಮೃತ ಸುರಿಸುತಿಲ್ಲಿರೆ । ಸಾಧಿಪುದು ಸರ್ವಸ್ವವೂ । ಯೋಧರಹುದೂ ॥ ೩ ॥ ಅಂತೆಯೇ ಬಂಕೇಶರೂಹಿತ । ವಂತರಂದಿನ ಕಾಲದಿಂಪಿತ । ರಂತರಂಗದ ಆಪ್ತ ಸೇನಾ । ಕಾಂತರಾಗಿಯೆ ಸೇವೆಗೇ । ನಿಂತ ಭಟರೂ ॥ ೪ ॥ ತರುಣಯೋಧರು ನಾಚುವಂತುರು । ತರದ ಶೌರ್ಯದಿ ಸೆಣಸಬಲ್ಲರು । ದುರುಳ ಗಂಗರು ಸಂಗರದ ಬಿರು । ಸರಿದು ಸರಿದೂ ಬಾಗಲೂ । ಆರುಹರಿದರೇ ॥ ೫ ॥ ಉತ್ತರಕ್ಕಿವರುಣಗಲೋಕಾ । ದಿತ್ಯದಳಪತಿಯಾಗಿ ವಿಜಯೂ । ದಿತ್ಯ ಮುಖ್ಯರು ಸಹಿತ ಸಾಗಲಿ । ಸತ್ವಯುತನಿವನರ್ಹನೂ । ಸತ್ಯಯುತನೂ ॥ ೬ ॥ ನಂದಿ ವರ್ಮಾದ್ಯಪ್ರತಿಮ ಭಟ । ವೃಂದ ಬಂಕೆಯರೊಡನೆತೆರಳಲಿ । ಕಂದಕೃಷ್ಣನು ನಮ್ಮ ಜೊತೆಯಲೆ । ನಿಂದು ಪುರವನು ಕಾಯಲೀ । ಚಂದವೆಲ್ಲಾ ॥ ೭ ॥





Scanned by CamScanner

॥ ಭಾಮಿನಿ ॥

ಸಿಡಿಲಿನಬ್ಬರವೋ ಕುಲಾಚಲ । ಬುಡಕುಸಿಯುತಂಬರಕೆ ನೆಗೆದು
ದೊ । ಕಡಲ ಮೊರೆತದ ಭರವೊ ಸಿಂಹದ ಭೀಕರಾರ್ಭಟೆಯೋ ॥ ಪೊಡವಿ
ಬಾಯ್ಬಿಟ್ಟುದೊ ಮಹಾರವ । ಗುಡುಗಿತೇನೇನೆನುತ ಸಭೆ ನಡ । ನಡುಗ
ಲಾಗಲಕಾಲವರ್ಷನು ಘರ್ಜಿಸುತಲೆಂದಾ ॥ ೧ ॥

॥ ರಾಗ ಮಾರವಿ ಏಕತಾಳ ॥

ತಂದೆಯವರೆ ತಾ । ವೆಂದುದದೇನದು । ಕಂದನು ಪುರದಲ್ಲೆ ನಿಂದಿರ
ಬೇಕೇ । ಹಂದೆಯೆ ನಾರಣ । ವೆಂದರೆ ಭಯ ಗೊಳಲೇ ॥ ೧ ॥ ತಂದೆ ಸುತ
ರನೇ । ನೊಂದೇ ಸ್ಥಾನಕೆ । ತಂದುದು ಸರಿಬಂತೇ । ಮುಂದಿಹ ಉಳಿದದು ।
ರಂಧರ ವೀರರ । ಹಿಂದಕೆ ಬಿಟ್ಟಂತೇ ॥ ೨ ॥ ಲೋಕಾದೀತ್ಯನ । ಸ್ವೀಕರಿಸ
ಲು ಬಹು । ತೇಕ ಪರಾಕ್ರಮಿಯೋ । ನಾ ಕಡಿಮೆಯೆದಳ । ಸಾಕೆನೆ ಕೇಳಿದೆ ।
ನೇಕೆ ಸಿಗದೊ ತಿಳಿಯೇ ॥ ೩ ॥ ತುಂಬಿದ ಸಭೆತನು । ಸಂಭವನಧಟನು ।
ಕಾಂಬಂತಾಯ್ತಲ್ಲಾ । ಎಂಬೀ ಪ್ರಶ್ನೆಗೆ । ಮುಂಬರಲುತ್ತರದ । ನಂಬುಗೆ
ಬೇಕಲ್ಲಾ ॥ ೪ ॥

॥ ರಾಗ ಕಲ್ಯಾಣಿ ಅಷ್ಟತಾಳ ॥

ಕೇಳುತ್ತದನೆಲ್ಲವಾ । ಸಾಮ್ರಾಟನು । ತಾಳುತ್ತ ಸಂಯಮವಾ । ಪೇ
ಳಿದನೆಲೆಕಂದ । ಬಾಲಿಶ ಪ್ರಶ್ನೆಯಿ । ದಾಳುವ ರಾಜನ । ಮೇಲಪರಾಧವೆ?
॥ ೧ ॥ ರಾಜಾಜ್ಞೆಗಿದಿರಾಡಲೂ । ಹಕ್ಕಾರಿಗೆ । ನೀ ಜಾತನೇ ಕಾಡಲೂ ।
ಯೋಜನೆಯೇನಿದು । ಆಜಿಗೆ ನಿಲುವುದು । ಸೋಜಿಗ ನಿಲವದು । ಸಾಜಕೊ
ಸಲ್ಲದು ॥ ೨ ॥ ಬಂಕೇಶನಣುಗ ನಾದಾ । ಲೋಕಾದಿತ್ಯ । ಶಂಕೆಯೇನ ಸಮ
ಯೋಧಾ । ಬಿಂಕರಹಿತ ನಕ । ಳಂಕ ಸಚ್ಚರಿತನ । ಮ್ಮಂಕಿತಕಿದ್ದನಾ । ಮಾಂಕಿ
ತ ಸೇವಕ ॥ ೩ ॥ ಅಷ್ಟರಿಂದೀಗ ನಿನ್ನಾ । ಪ್ರತಿಷ್ಠೆಗೆ ಪೆಟ್ಟೇನುಜೊತೆಯೊ



ಳಿನ್ನಾ । ಕಟ್ಟಳೆಯಂತೆಯಿ । ಪಟ್ಟಣ ರಕ್ಷೆಯು । ನಿಷ್ಠೆಯೊಳೆಸಗಲ । ದೆ
ಷ್ಟೊಂದು ಗೌರವ ॥ ೪ ॥ ಸಾಕಲ್ಲ ನಿನಗುತ್ತರಾ । ಸಭಿಕಜನ । ಮೂಕರಲ್ಲ
ವರೆತ್ತರಾ । ಸ್ವೀಕಾರವಿದ್ದುನೀ । ನೇಕೆ ಪ್ರಶ್ನಿಸಿದೆಯೊ । ಬೇಕಾದರೀ ಮಂತ್ರಿ
ಶೇಖರರನು ಕೇಳು ॥ ೫ ॥

॥ ರಾಗ ಸಾವೇರಿ ಅಷ್ಟತಾಳ ॥

ಪಾತಾಳ ಮಲ್ಲತಾ । ನಾತತರೂಕ್ಷಣಕೆಂದ । ಮಾತಿದು ಸತ್ಯ ಕಂದಾ ।
ಭೂತಳೇಶ್ವರ ರಾಜ್ಞೆ । ಗೇತಕೆ ಪ್ರಶ್ನಿಪೆ । ನೀತಿಯ ನಡತೆ ಚಂದಾ ॥ ೧ ॥
ಅಪ್ಪಣೆಯಂತೆ ನೀ । ನೊಪ್ಪಿಕೊಂಡಿರು ಬರಿ । ದರ್ಪದ ಮಾತು ಬೇಡಾ ।
ಅಪ್ಪನೊಡನೆವಾದ । ತಪ್ಪದೆ ತಪ್ಪದ । ನಪ್ಪುವನಂಥ ಮೂಢಾ ॥ ೨ ॥
ಬುದ್ಧಿವಂತನು ನೀ ಪ್ರ । ಸಿದ್ಧನಪ್ಪವ ಮುಂದೆ । ಕೃದ್ಧತೆ ಸರಿಯಲ್ಲವೂ ।
ಉದ್ಧಟತನ ಬಿಟ್ಟು । ಶುದ್ಧಮನಸನಿಟ್ಟು । ತಿದ್ದಿಕೊಗೆಲುವೆಲ್ಲವೂ ॥ ೩ ॥

॥ ಭಾಮಿನಿ ॥

ಅಹುದಹುದು ನೀವವರ ಪಕ್ಷವ । ವಹಿಸಿಯೇ ಮಾತಾಡಲಿಪ್ಪವ ।
ರಹಿತವೇ ಕಂಡೆನ್ನ ಜರೆವಿರಿ ಸಾಕು ಸಾಕಂತೂ । ವಿಹಿತವಲ್ಲೆನ ಗಿಂದಿನೀ ಸಭೆ ।
ಯಹಹ ನಿಮಗೇ ಚಂದವೆಲ್ಲವ । ಸಹಿಸುವವನಲ್ಲೆನುತ ಪೊರಟನು ನೃಪ
ಕುಮಾರಕನೂ ॥ ೧

॥ ಕಂದ ಪದ್ಯ ॥

ಕಾಣುತ್ತದನೆಲ್ಲವ ನೃಪ । ಮೌನದೊಳಿರೆ ಸಭಿಕರಚ್ಚರಿಗೊಳಲ್ ಬಳಿ
ಕಂ । ಏನಂತಿರುವಿರಿ ಯುದ್ಧಕೆ । ಸೇನೆಯು ನಡೆಯಲಿಯೆನುತ್ತಲೆದ್ದಂ
ಭೂಪಂ ॥ ೧ ॥



Scanned by CamScanner

॥ ರಾಗ ಸೌರಾಷ್ಟ್ರ ತ್ರಿವುಡೆ ತಾಳ ॥

ಉತ್ತರಕೆ ಬಲ ಸಹಿತ ಲೋಕಾ । ದಿತ್ಯದಳಪತಿಯಾಗಿ ತೆರಳೆವು । ಹತ್ತಿರದ ಸೈನಿಕರನೊಡಗೂ । ಡುತ್ತ ಬಂಕಾ ॥ ೧ ॥ ಆ್ಯದೆ ದಕ್ಷಿಣ ದಿಕ್ಕಿಗಿತ್ತಲು । ಚೇದಿ ಶಂಕರ ಗಣನು ಸಭೆಯ | ಲ್ಲಾದುದೆಳಸುತ ದಳಪತಿತ್ವವು | ಹೋದುದಲ್ಲಾ ॥ ೨ ॥ ಹುಡುಗ ಲೋಕಾದಿತ್ಯಗಿಂತಲು | ಕಡಿಮೆಯಾಯಿತೆಯೆನ್ನ ಯೋಗ್ಯತೆ | ನಡೆಸಬೇಕಿದಕೊಂದು ತಂತ್ರವ ನೊಡನೆಯೆನುತಾ ॥ ೩ ॥ ಗೆಳೆಯನಾದನೊಳಂಬಮಂಗಿಯ | ಬಳಿಗೆ ಪೋಗುತ ವಿಷಯವೆಲ್ಲವ | ತಿಳುಹಿ ನಿನ್ನಭಿಮತವ ಪೇಳೆನ | ಲೊಳವನುಡಿದಾ ॥ ೪ ॥

॥ ರಾಗ ಕೇದಾರ ಗೌಳ ಝಂಪೆ ತಾಳ ॥

ಮಿತ್ರ ನೀನೆಂದ ಮಾತೂ | ಸರಿ ಸರೀ | ಚಿತ್ತಕೆಲ್ಲವು ತಿಳಿಯಿತೂ | ಸತ್ವವಂತರು ನಾವಿರೇ | ಅಘೋರ | ನೆತ್ತರಕ್ಕೇರ್ದ ನರರೇ ॥ ೧ ॥ ಮಂತ್ರಿ ಸೇನಾಪತಿಗಳೂ | ಭೂಪಾಲ | ನಂತರ್ಯದಾಪ್ತರಿರಲೂ | ಇಂತಾಗದುಂಟೆ ನೃಪನೂ | ಪುತ್ರನಿಗು | ಸಂತಾಪಕೆಡೆಗೈದನೂ ॥ ೨ ॥ ಇದಕೊಂದು ಸೂತ್ರವಿಹುದೂ | ನೃಪಸುತನ | ಕೆದಕಿದರೆ ಕಾರ್ಯವಹುದೂ | ಮೊದಲೆನ ಮಗವ ಮಿತ್ರನೇ | ಆತನಿಹ | ಸದನಸೇರುವ ಥಟ್ಟನೇ ॥ ೩ ॥

॥ ಭಾಮಿನಿ ॥

ತರಳ ಶಿಷ್ಯರೆ ನೋಡಿದಿರೆ ಮೂ | ರ್ಖರ ವಿಚಾರವ ವಿಧಿಯು ನಿಯಮವ | ಬರಿದುಗೊಳಿಸಲ ಸಾಧ್ಯವಿಂತಾದುಷ್ಟರೊಂದಾಗೀ | ತೆರಳ ಕೃಷ್ಣನ ಗೃಹಕೆ ಕಾಣುತ | ಲರರೆ ನೀವೇನ್ನುರಕೆ ಪೋಗದೆ | ಸರಿದಿರೀಕಡೆಗೆನಲು ಶಂಕರ ಗಣನೆ ತಾನೆಂದಾ ॥ ೧ ॥



॥ ರಾಗ ಬೇಗಡೆ ಏಕತಾಳ ॥

ಲಾಲಿಸೈಭೂ | ಪಾಲಸುಕುಮಾರಾ | ಪರಮಾಪ್ತ ಮಿತ್ರವಿ | ಶಾಲಮತಿಸಚ್ಛೀ । ಲರಣ ವೀರಾ | ಕಾಲ ಮಹಿಮೆಯೊ । ಕಾಳು ತನವೋ | ಓಲಗದಿಬಲ | ಶಾಲಿಗಳ ಬೀಟ್ಬಾಳು ಸಹಸದಿ | ಕೀಳೆನಿಪಬಡ | ಬಾಲಕನ ನೃಪ | ಮೇಲಕೆತ್ತಿದ ॥ ೧ ॥ ವೀರಧೀರೋ । ದ್ದಾರ ಸುಕುಮಾರ | ನೀನಿರ್ದ ಸಭಿಕರ | ಪಾರಮೆರೆದಿರ | ಲಾರದಪಚಾರಾ | ಹೋರೆಡೆಳದಧಿ | ಕಾರನಿನಗೇ | ಸೇರಬೇಕದ | ನಾರುತಡೆದರು | ಘೋರ ತಪ್ಪದು | ಭೂರಮೇಶನೆ | ದಾರಿ ಬಿಟ್ಟು ವಿಚಾರ ಮರೆತನು ॥ ೨ ॥ ಮಂತ್ರಿ ಸೇನಾ | ಕಾಂತ ಬಂಕೇಶಾ | ಅವರಿಬ್ಬರೊಂದೇ | ತಂತ್ರ ಫಲಿಸಿವು | ಹಾಂತ ಭೂಮೀಶಾ । ಸ್ವಂತ ಯೋಚಿಸ | ದಿಂತದಾಯಿತು | ಹಂತ ಮುಂದ್ವರಿ | ವಂತ ಹಂಚಿಕೆ | ಯಿಂತಿಹುದು ಪೀ | ಠಾಂತರದ ಗುರಿ | ಯಾಂತೇ ನಿನ್ನನು | ಹಿಂತೆಗೆವ ಬಗೆ ॥ ೩ ॥

॥ ರಾಗ ಕಲ್ಯಾಣಿ ಏಕತಾಳ ॥

ಮಂಗಿಯುಷ್ಟರೊಳೆಂದನೂ । ಅಹುದಹುದೀ । ಸಂಗತಿ ಧಿಟವಿದನೂ । ಸಂಗಾತಿನಿನಗೆಂದು । ಭಂಗದ ಬಗೆಗೊಂದು । ಭಂಗಿ ಹುಡುಕಲೆಂದು | ತಂಗಿದುದಾವಿಂದೂ ॥ ೧ ॥ ಪಟ್ಟವಕಳಕೊಂಡರೇ | ನಿನ್ನಯ ಸುಪ್ರ | ತಿಷ್ಠೆಯಳಿವಕಂಡರೇ | ಎಷ್ಟಕ್ಕು ಸಹಿಸೆವು | ನಿಷ್ಠುರು ನಿಮಗಾವು | ಕಷ್ಟ ಸುಖಾಂಶವು | ಬಿಟ್ಟಿರಲಾರೆವು ॥ ೨ ॥ ಎಂತಾದರೂ ನಿನಗೇ | ಪಟ್ಟವ ಕಟ್ಟು | ವಂಥ ಯೋಚನೆ ನಮಗೇ | ಪಂಥ ಪೌರುಷದಿಂದ | ಸ್ವಂತಿಕೆ ಮೆರೆವಂದ | ವಂತಾಗಲೂ ಹೊಂದ | ಲಂತು ಕಾರ್ಯವು ಚಂದ ॥ ೩ ॥

॥ ರಾಗ ಭೈರವಿ ಝಂಪೆ ತಾಳ ॥

ಭೂಪಾಲ ತನಯನಾ | ಕೋಪದಿಂದೆಂದನು ಪ್ರ | ತಾಪಿಗಳು ನೀವೆ ಪ್ರ | ಸ್ಥಾಪಿಸಿದ ಹಿತಕೇ ॥ ೧ ॥ ಎರಡಾಡುವೆನೆ ನಾನು | ಘುರದೊಳವರೆ



Scanned by CamScanner

ಲ್ಲರನು । ತರಿಯುವುದು ಘನವೇನು । ಪರಿಕಿಸಲಿ ಸಹಸಾ ॥ ೨ ॥ ದಿಟ್ಟರಂ ತಾಕ್ರಮಿಸಿ । ಪಟ್ಟವಣೆಯನುಗಳಿಸಿ । ಬಿಟ್ಟರದಕನು ಸರಿಸಿ । ಕಟ್ಟಳೆಯು ಮೆರೆಗೂ ॥ ೩ ॥

॥ ಭಾಮಿನಿ ॥

ಆದರೀಕ್ಷಣದಿಂದ ಕಾರ್ಯವ । ಸಾಧಿಪುದು ಸರಿಯಲ್ಲ ನಮ್ಮಯ । ಚೇದಿಗೈದುತ ಮೂವರಲ್ಲಿಯೆ ಬಲವ ಸಂಗ್ರಹಿಸೀ । ಮೇದಿನೀ ಪಟ್ಟವನು ಪಡೆಯುವ । ಹಾದಿ ಸುಗಮವೆನುತ್ತಲೊಪ್ಪಿಸು । ತೂದಿ ಶಂಕರ ಗಣನು ಕರ ಕೊಂಡವರನ್ನೈದಿದನೂ ॥ ೧ ॥

॥ ಕಂದ ಪದ್ಯ ॥

ಅತ್ತಲ್ ಬಲಸಹಲೋಕಾ । ದಿತ್ಯಂರಿಪುಸೇನೆಯಂ ಮುಸುಕೆ ಕಾಣು ತ್ತಂ । ನಿತ್ತಿದಿರಿಸೆ ಗುಣಶೇಖರ । ಸತ್ವದಿ ವಿಜಯಾರ್ಕನು ತಡೆದೆಂದಂಕಸ ಲಂ ॥ ೧ ॥

॥ ರಾಗ ಪಂತುವರಾಳಿ ಮಟ್ಟೆ ತಾಳ ॥

ಯಾರೆಲಾ ಮದಾಂಧನಿಂದ । ವೀರ ಪೆಸರ ನೊಂದ ಕುಂದ । ದಾರದು ಸುರುಚಂದದಿಂದ । ಧೀರ ನಾಕಣ ॥ ೧ ॥ ಕೇಳುವಾತನಾರು ನೀನು । ಪೇಳು ಗುಣಶೇಖರನು ನಾನು । ಕಾಳಗದಿ ಸಮರ್ಥನಿಹೆನು । ಮೇಲು ಮಂತ್ರಿಯೂ ॥ ೨ ॥ ಅರಿಯೆಯೊ ಚಾಲುಕ್ಯಭೂಪ । ನಿರುವೆ ವಿಜಯ ರವಿ ಪ್ರತಾಪ । ಶರಧಿ ಕೆಣಕೆ ಹಿಂದೆ ಪೋಪ । ಸ್ಮರಣೆ ನೀ ಬಿಡೂ ॥ ೩ ॥ ಧುರದಿ ಸೋತು ರಾಷ್ಟ್ರಕೂಟ । ದರಸನಡಿಗೆ ಚಾಚಿ ಮಕುಟ । ಶರಣು ಹೊಂದಿದಂಥ ಸುಭಟ । ನರಿವೆ ಬಿಡು ಹಟಾ ॥ ೪ ॥ ಮುಚ್ಚು ಮುಚ್ಚು ಬಾಯು ನಿನ್ನ ।



ಹುಚ್ಚ ನಿಲಿಪೆ ಪರಕಿಸೆನ್ನ । ಕೆಚ್ಚ ಸೆಣಸಿ ನೋಡು ಮುನ್ನ । ಬೆಚ್ಚಿ ಬೆದರದೇ ॥ ೫ ॥ ಭಲರೆ ನೋಡೆನುತ್ತಕತ್ತಿ । ಝಳಪಿಸುತ್ತ ಬರೆ ಮುಂದೊತ್ತಿ । ಛಲದಿ ಸೆಣಸೆ ಹತ್ತಾ ಹತ್ತಿ । ಗಿಳಿಯೆನಿಮಿಷದಿ ॥ ೬ ॥ ಕತ್ತಿಯನ್ನು ಸೆಳೆದು ವಿಜಯಾ । ದಿತ್ಯ ಪಡೆದನೊಡನೆ ವಿಜಯ । ಮತ್ತೆ ಮಂತ್ರಿಕಾದಲರಿಯ । ಪತ್ತ ಸರಿಯಲೂ ॥ ೭ ॥

॥ ರಾಗ ಭೈರವಿ ಏಕತಾಳ ॥

ಸೇನಾಧಿಪ ಮಕರಂದಾ । ಸು । ತ್ರಾಣಾದಿ ತಡೆಯುತಲೆಂದಾ । ಹೂಣೆಗನಾದೆಯನೋಡೂ । ನಾ । ನೇ ನಿಂದಿಹೆರಣ ಮಾಡೂ ॥ ೧ ॥ ನೀನೇನಾಪರ ಶಿವನೇ । ಛೀ । ಪ್ರಾಣವಕಳಕೊಂಬವನೇ । ಕಾಣಿಸು ನೋಳ್ಪೆನು ಸಹಸಾ । ನಿಂ । ತಾಣತಿಗೀಮನ ಸಹಿಸ ॥ ೨ ॥ ಬಿಡು ಬಿಡು ಸಾಕೀ ಬಿಂಕಾ । ಭಯ । ಪಡನೀ ಮಕರಂದಾಂಕ । ಪೊಡವಿಯನೇ ಪುಡಿಗೈವೇ । ನೀ । ಕೊಡೆರಣ ಸೆರೆ ಮನೆಗೊಯ್ವೇ ॥ ೩ ॥ ಆದರೆ ನಿನಗೇನರಿಯೂ । ಸಂ । ಪಾದಿಸ ಬೇಕಾ ಶೌರ್ಯ । ಕಾದಲಿಕನುವಾಗೊಡನೇ । ಬರಿ । ವಾದವೆ ಬೇಡೆನ್ನೊಡನೇ ॥ ೪ ॥ ಎಂದೆನೆಖಡುಗವನೆತ್ತೀ । ಮಕ । ರಂದನು ಬರೆ ಮುಂದೊತ್ತಿ । ಒಂದೇ ನಿಮಿಷದಿ ರಣದೀ । ಸೇ । ನೇಂದ್ರನು ಸೋಲಲ್ಕ್ಷಣದೀ ॥ ೫ ॥

॥ ಭಾಮಿನಿ ॥

ವೀರ ವಿಜಯಾದಿತ್ಯ ಮುಂದಿಂ । ನಾರು ಬಹರೆಂದೆನುತ ಘರ್ಜಿಸಿ । ಸಾರಿ ಮುಂದಕೆ ಕರದ ಕರವಾಳವನು ತಿರುಹುತಿರೇ । ಧಾರುಣೀಪತಿ ಮಿಹಿರ ಭೋಜನು । ಮೂರು ಲೋಕವೆ ನಡುಗುವಂದದೋಳಾರುಭಟಿಸುತ ಸಾರ್ದು ಖಡ್ಗವ ಝಳಪಿಸುತಲೆಂದಾ ॥ ೧ ॥

॥ ರಾಗ ಭೈರವಿ ಝಂಪೆ ತಾಳ ॥

ಭಳಿರೆ ವಿಜಯಾದಿತ್ಯ । ಬಲು ಸಾಹಸವ ನಿತ್ಯ । ಬಳಸುವೆಯ ದಳ



Scanned by CamScanner

ಪತ್ರಿಯು । ಗೆಲಿದು ಹಾರುವೆಯೊ ॥ ೧ ॥ ಆಹುದಹುದು ನೀನಾರು । ಮಿಹಿರ
ಭೋಜನೊತೋರು । ಸಹಸವೆಷ್ಟೆಂದಿದಿರು । ಬಹಳ ಮಾತೇಕೇ ॥ ೨ ॥ ಹ
ಡುಗನೀ ನಿನ್ನಪಿತ । ನೊಡಲ ಬಗಿದಿರುವಾತ । ನಡಿಗೆ ಪೊಡವಟ್ಟುಹಿತ ।
ನೆಡೆಸೇದುರ್ದರಿವೇ ॥ ೩ ॥ ಮೊದಲೆ ನೃಪತುಂಗನೊಳು । ಕದನದಲಿ ಸೋ
ತ ಹುಲು । ಮದಮುಖನೆ ನಿನ್ನ ಬಲು । ಹದ ನರಿವೆ ನಿಲ್ಲೊ ॥ ೪ ॥ ಹಿಂದಿ
ನದ ಬಿಡುಯಿೂಗ । ಬಂದಿಹುದು ಹೊಸ ಯೋಗ । ಹಂದೆ ನಿನ್ನಿಂದಾಗ ।
ದೆಂದರಿವಿ ಬೇಗಾ ॥ ೫ ॥ ಅಷ್ಟು ಸಾಹಸ ಪಡೆದು । ಹುಟ್ಟಿಬಂದೆಯ ನುಡಿ
ದು । ಪೆಟ್ಟು ತಿನ್ನದೆ ನಡೆದು । ಬಿಟ್ಟರೊಳ್ಳೆಯದೂ ॥ ೬ ॥ ನುಡಿಗೆ ಕೋ
ಪಿಸುತಾಗ । ಘುಡು ಘುಡಿಸುತಲಿ ಖಡುಗ । ಝುಡಿದೆರಗಲವ ಬೇಗ । ತಡೆ
ದರ್ನೆನ್ ಯೋಗ ॥ ೩ ॥

## ॥ ಕಂದ ಪದ್ಯ ॥

ಕಡುಹಿಂ ಕಾಳಗ ಗೈದರ್ । ಕಡೆಗಾ ವಿಜಯೂರ್ಕ ಸೋಲಲಾಕ್ಷಣದೊ
ಳಗಂ । ತಡೆದಿದಿರವನಂ ತೊಲಗಿಸಿ । ಕಡುಹಿಂ ಲೋಕಾರ್ಕನೆಂದ ಖತಿ ಮಸ
ಗುತ್ತಂ ॥ ೧ ॥

## ॥ ರಾಗ ಶಂಕರಾಭರಣ ಮಟ್ಟೆ ತಾಳ ॥

ಭಳಿರೆ ಮಿಹಿರ ಭೋಜ ಸಮರ । ಗಳಿಸೆ ಗಡಿಯ ದಾಟಿ ಪಡೆಯ ।
ನೊಳಗೆ ನುಗ್ಗಿಸುತ್ತ ಹಿಗ್ಗಿ । ಗೆಲುವ ಪಡೆದೆಯ ॥ ೧ ॥ ಯಾರು ನೀನು ಕೇಳ
ಲದನು । ಪೋರ ಹಿಂದೆ ಪೋಪುದೊಂದೆ । ದಾರಿ ನಿನಗೆ ಸೇರು ಮನೆಗೆ ।
ಹೋರಲಸದಳಾ ॥ ೨ ॥ ಪಿತ ಬಂಕೇಶರಿಹರ್ವಿಶೇಷ । ಸ್ಥಿತಿಗೆ ನಿನ್ನ ಕಳು
ಹಲೆನ್ನ । ಪೃಥಿವಿಯೊಡೆಯ ಬಿಡಲು ಪಡೆಯ । ಪತಿಯೆ ಬಂದೆನೂ ॥ ೩ ॥
ಬಂಕತನಯ ಬರಿದೆ ಬಾಯ । ಬಿಂಕವೇಕೆ ಬಿರಿದು ಬೇಕೆ । ಸಂಕಟಕ್ಕೆ ಸಿಲುಕ
ಲಿಕ್ಕೆ । ಹೊಂಕರಿಸುವೆಯೊ ॥ ೪ ॥ ಪಿಥ್ಥ ತಲೆಗೆ ಹತ್ತಿ ಮಲಗೆ । ಮತ್ತನಾಗೆ
ಬಂದೀ ಕಡೆಗೆ । ಕತ್ತಿಯೆತ್ತೆ ಕಾಂಬೆ ಮತ್ತೆ । ಸತ್ತೆ ಬೀಳುವೀ ॥ ೫ ॥



## ॥ ರಾಗ ಭೈರವಿ ಏಕತಾಳ ॥

ಕಂದನೆ ಗರ್ವವಿದೇಕೇ । ನಿಂ । ನಿಂದಾಗದ ಕಾರ್ಯಕ್ಕೇ । ಮುಂದ್ವರಿ
ವುದುಥರಪಲ್ಲಾ । ಬಂ । ದಂದದಿ ಸಾಗೆಸುಖವೆಲ್ಲಾ ॥ ೧ ॥ ಕಂದನೆನುತಕಾ
ಳಗಕೇ । ನೀ । ನಿಂದರೆ ಸಾಯುವಿ ಜೋಕೇ । ಬಂದೆಮ್ಮರಸನಪದಕೇ । ಆ
ಭಿ । ವಂದಿಸಿಕೋನೀ ಬದುಕೇ ॥ ೨ ॥ ಎಷ್ಟರ ಧೈರ್ಯವೊ ನಿನಗೇ । ಈ ।
ವಿಟ್ಟತೆಯಾಡುವರೆನಗೇ । ಕಟ್ಟರಿಸಿಂತಹ ಮಾತಾ । ಬಾ । ಯ್ಬಿಟ್ಟರೆ ನಿನಗ
ಪಘಾತ ॥ ೩ ॥ ಏನೆಂದೆಣಿಸಿದೆಯೆನ್ನಾ । ಇಂ । ನೂನೀನದನೇ ಮುನ್ನ ।
ಧ್ಯಾನಿಸುತೊದರಲು ನಿನಗೇ । ಮತಿ । ಹೀನತೆಧಿಟಜಯವೆನಗೇ ॥ ೪ ॥

## ॥ ಭಾಮಿನಿ ॥

ಆದರೀಕ್ಷಿಸು ಸಾಹಸವನೆಂ । ದಾಥರಾಧಿಪ ಖಡುಗ ಝಳಪಿಸೆ ।
ಕಾದಿದರುಕನಲುತ್ತ ಖಾಡಾ ಖಾಡಿಯಿಂದಾಗಾ । ಸಾಧನೆಯ ಸಾಹಸದ
ಸಿದ್ಧಿಯ । ಹಾದಿಯಲಿ ಬಂಕೇಶನಣುಗ ವಿ । ರೋಧಿಯಿಂ ಮುಂದಾಗಿ ಜಯಿ
ಸಲು ನೃಪನು ಶರಣಾದ ॥ ೧ ॥

## ॥ ರಾಗ ಸಾರಂಗ ಏಕ ತಾಳ ॥

ಭಳಿರೆ ಮೆಚ್ಚಿದೆ ಬಲು ಭಟನೇ । ಈ । ಕೊಳುಗುಳವೇ ಪೊಸ ಘಟ
ನೇ । ತಿಳಿಯಾಯ್ತುಮನವೀಗ । ತಿಳುವಳಿಕೆಯ ಯೋಗ । ಫಲಿಸೀತೀ ಬಗೆ ।
ಬಳಸೆನ್ನೆಹಗೆ । ಹಳಿದ ಹಳೆ ಹೊಗೆ । ತೊಲಗಿತಿಂದಿಗೆ ॥ ಭಳಿರೆ ॥ ೧ ॥ ಕನ್ನ
ಡ ಕಡುಗಲಿಕಂದಾ । ನಿಂ । ನಿಂದಲೆ ಮರೆಸಿತು ಕುಂದ । ಪನ್ನೀರ ಪರಿಮಳ ।
ವನ್ನುಳುಹಿದ ಫಲ । ಬಣ್ಣಿಸಲುಸಿಗ । ದುನ್ನತಿಯ ಸೊಗ । ಸನ್ನುತ್ರೈಜಗ ।
ಸನ್ನುತಿಸುವಯುಗ ॥ ಭಳಿರೆ ॥ ೨ ॥ ನೃಪತುಂಗ ನೃಪಚಕ್ರವರ್ತೀ । ಎಂ ।
ನಪರಾಧಕ್ಷಮಿಸಲಿ ಪೂರ್ತಿ । ಕೃಪೆಗೈಯುವಂತೆ ನೀ । ನು ಪಕರಿಸಿದಡಿನ್ನೀ ।
ಶಪಥ ಬಿಟ್ಟೆನು ಶರಣನಪ್ಪೆನು । ಸಫಲಗೊಂಬೆನು ಸಭೆಯ ಕಾಂಬೆನು ॥೩॥



Scanned by CamScanner

॥ ವಾರ್ಧಿಕ್ಯ ॥

ಇಂತು ಪಾರ್ಥಿಸಲಭೆಯವಿತ್ತು ಮನ್ನಿಸಲತ್ತ । ಪಂಥದಿಂ ಮುಂಗಿ ಶಂಕರ ಗಣರು ಕೃಷ್ಣನಂ । ಮುಂತಿಟ್ಟು ಸಾರ್ದೊಡನೆ ಚೇದಿಪುರವಂ ಸೇರ್ದು ಸರ್ವಸಿದ್ಧತೆಗೈಯಲೂ । ಸಂತುದಿನಕೆಲವೆಡೆಯೊಳೊಂದು ಸುಮುಹೂರ್ತದಲಿ । ಕಾಂತೆ ಕನಕಾಂಗಿ ಶಂಕರಗಣನಸಹಜಾತೆ । ನಿಂತಿರಲು ಸುಮುವನದಿ ವೈಯೂರದಿಂದಲದ ಕಂಡನಾಕ್ಷಣ ಕೃಷ್ಣನೂ ॥ ೧ ॥

॥ ರಾಗ ಶಂಕರಾಭರಣ ಅಷ್ಟತಾಳ ॥

ಕಂಡನೂ । ಕನಕಾಂಗಿಯ ಕೃಷ್ಣನು । ಕಂಡನೂ ॥ ಪಲ್ಲ ॥ ಕಂಡನು ಕನಕಾಂಗಿಯಳನೂ । ಕಂಡ । ಕಂಡಷ್ಟು ತೃಪ್ತಿಯುಗೊಳನೂ । ಮತ್ತು । ಕಂಡು ಕಂಡೇಳದೆಯಿಹನೂ । ಮಾರ । ನಂಡಲೆಗೇ ಗುರಿಯುಹನೂ । ಅಂದು । ಕೊಂಡ ತನ್ನೊಳಗೆ ಭೂ । ಮಂಡಲದೊಳಗಿಲ್ಲ । ಖಂಡಿತ ಇವಳಂಥ । ಪುಂಡರೀಕಾಕ್ಷಿಯು ॥ ಕಂಡನೂ ॥ ೧ ॥ ಚಂದದ ಮೊಗ ಚಂದ್ರನಂತೇ । ಹುಟ್ಟಿ ಬಂದಳಿವಳು ಸೊಬಗಾಂತೇ । ಒಂದೂ । ಕುಂದು ಕೊರತೆಯಿಲ್ಲದಂತೇ । ಬ್ರಹ್ಮ । ಮುಂದಿಟ್ಟು ನೆನೆಕಾಂಬ ಕಾಂತೇ । ಆಹಾ । ಕಂದರ್ಪನಾನೆಯೋ । ಇಂದ್ರನರ್ಧಾಂಗಿಯೊ । ಇಂದಿರೆಯೋ ಯೆಂ । ಬಂದದೆ ಮೆರೆವಳು । ಕಂಡನೂ ॥ ೨ ॥ ಕಮನೀಯಗಾತ್ರೆಯೂ ಚದುರೇ । ದೊಡ್ಡ । ಯಮಿಗಳ ಮುಂದೊಮ್ಮೆ ಚದರೇ । ಮನೋ । ಭ್ರಮೆ ಗೊಂಬರ್ಕುಡಿದಂತೆ ಮದಿರೇ । ಎನ್ನ । ಲಮಮ ಸಾಮಾನ್ಯರಿನ್ನಿದಿರೇ । ಹೆಚ್ಚು । ಸಮಯ ಸಹಿಸಲಾರೆ । ಸುಮಶರದುರಿಯೇರೆ । ಸಮುಚಿತ ವೈಯಾರೆ । ಕ್ರಮ ತಪ್ಪಳೀ ನೀರೆ । ಕಂಡನೂ ॥ ೩ ॥

॥ ಕಂದ ಪದ್ಯ ॥

ಕಂದರ್ಪನಶರದುರಿಯೊಳ್ । ನೊಂದೇಕಿರ್ಪುದು ವಿಚಾರಿಸಿದರಾನಿವಳಂ । ಚುದದಿಕೇಳಿದರೆಲ್ಲವ । ನೆಂದಪಳೆಂದೆಣಿಸುತಲವಳೊಡನಿಂತೆಂದಂ ॥ ೧ ॥



॥ ರಾಗ ನಾಟಿ ರೂಪಕ ತಾಳ ॥

ಚಂದ್ರಾನನೆ ಸನ್ಮೋಹನೆ । ಇಂದೀವರಸಮಲೋಚನೆ । ಕಂದರ್ಪನೆ ಕಳುಹಿರ್ಪನೆ । ಸಂದರ್ಶನೆಗಿಂಬಿತ್ತನೆ ॥ ೧ ॥ ಪೆಸರಾವುದು ಪೇಳೇನದು । ವಶವಾದುದು ಮನವೆನ್ನದು । ಪುಸಿಯಲ್ಲದು ಸ್ವೀಕರಿಪುದು । ಹಸನಪ್ಪುದು ಹಳತಾಗದು ॥ ೨ ॥ ನಂಬೆನ್ನನು ನಾ ನಿನ್ನನು । ತುಂಬಿರ್ಪೆನು ತುಹಿನಾಪ್ತನು । ಬಿಂಬಿಸುವನುನಗು ನೋಳ್ಪೆನು ॥ ೩ ॥

॥ ರಾಗ ಕೇದಾರ ಗೌಳ ಝಂಪೆ ತಾಳ ॥

ನಸುನಗುತಲದಕೆಂದಳೂ । ನಾನಿಲ್ಲೆ । ವಸತಿಯಿದ್ದೂ ತಿಳಿಯಲೂ । ಪೊಸತೇನು ನಿಮ್ಮನೆಂದೂ । ಕಾಂಬೆನಾ । ಪೆಸರು ಕನಕಾಂಗಿಯೆಂದೂ ॥ ೧ ॥ ನೆನಪಿಲ್ಲ ಕಂಡುದೆಸಗೇ । ನೃಪತುಂಗ । ನಣುಗನೀಕೃಷ್ಣ ನಿನಗೇ । ಮನವಿತ್ತ ಪತ್ನಿಯಾಗೂ । ರಾಜನಂ । ದನೆಯಲ್ಲವೇನೆಹೇಗೂ ॥ ೨ ॥ ಅಹುದಣ್ಣ ಶಂಕರಗಣಾ । ಒಪ್ಪಿದರೆ । ಸಹಿಯಿವೆರೂಪಸುಗುಣ ಸಹಬಾಳ್ವೆಗೆರಕವೆಂದೂ । ಬಲ್ಲೆನಿ । ರ್ವಹಿಸಬಹುದೆಲ್ಲ ಮುಂದೂ ॥ ೩ ॥

॥ ಕಂದ ಪದ್ಯ ॥

ಇನಿತೆಂಬುದನೆಲ್ಲವನುಂ । ಮನೆಯಿಂದಲೆ ನೋಡುತಿದ್ದ ಶಂಕರಗಣನುಂ । ಕ್ಷಣಕೈತಂದೀರ್ವರ ಬಳಿ । ಮನಕಚ್ಚರಿಗೊಳಿಸುತೆಂದ ನಸುನಗೆ ಬೀರ್ದು ॥ ೧ ॥

॥ ರಾಗ ಸುರುಟಿ ಏಕ ತಾಳ ॥

ಒಳ್ಳಿತಾಯ್ತುಕಾರ್ಯೂ । ಮೆಚ್ಚಿದೆ । ನೊಳ್ಳಿತಾಯ್ತು ಕಾರ್ಯೂ । ಎ



Scanned by CamScanner

ಲ್ಲವ ಕೇಳ್ದೆ । ಲ್ಲಿಲ್ಲದ ಸಂತಸ । ದಲ್ಲೋಲಾಡುತ। ಲಿಲ್ಲಿಗೆ ಬಂದೆನು ॥ ಒಳ್ಳಿ ತಾಯ್ತು ಕಾರ್ಯ ॥ ೧ ॥ ತಕ್ಕುದಾದ ಜೋಡೀ । ನಿಮ್ಮದಿ । ದಕ್ಕೆ ನಲಿವೆ ನೋಡೀ । ಸಕ್ಕರೆ ಕ್ಷೀರಕೆ । ಇಕ್ಕಿದೋಲಾಯ್ತಿಂ । ನಕ್ಕರೆಯಲ್ಲವೆ । ನಕ್ಕರೆ ಸಾಲದೆ । ಒಳ್ಳಿತಾಯ್ತು ಕಾರ್ಯ ॥ ೨ ॥ ಒಳ್ಳೆಲಗ್ನದಲ್ಲೇ । ಮದುವೆಯ । ನೆಲ್ಲಗೈವೆ ನಿಲ್ಲೇ । ಕಲ್ಲೆದೆಯುವನೇ । ನಲ್ಲವು ತಿಳಿಯಿರಿ । ಗೆಲ್ಲದು ನಮ್ಮದು । ನಲ್ಲನಲ್ಲೆಯರೆ । ಒಳ್ಳೆದಾಯ್ತು ಕಾರ್ಯ ॥ ೩ ॥

॥ ಭಾಮಿನಿ ॥

ಎಂದೆನುತಲಾ ಚೇದಿಭೂಪನು । ಹಿಂದು ಮುಂದೆಲ್ಲವನು ಯೋಚಿಸಿ । ಚಂದದಿಂ ಜೋಯಿಸರ ಕರೆಸುತಲರಿತು ಸುಮುಹೂರ್ತ । ಅಂದಮಿಗೆ ವೈಭವದಿ ಮದುವೆಯ । ಮುಂದಿಜನಕೊಂಡಾಡಲೆಸಗಿದ । ಮುಂದೆಲಾಲಿಸಿರಿತ್ತ ಗಂಗರ ತಡೆದ ಬಂಕೇಶಾ ॥ ೧ ॥

॥ ಕಂದ ಪದ್ಯ ॥

ಮಂತ್ರೀಶ್ವರ ಮತಿವಂತಂ । ತಾಂತೆಡೆದಾಗಳ್ ಕಠಾರಿ ತಿರುಹುತಬರಲುಂ । ಪಂಥದೊಳಾ ಕಾಂಚೀಪತಿ । ದಿನಿಂತಿರಾಂತೆಂದ ನಂದಿವರ್ಮಂಖತಿಯಿಂ ॥ ೧ ॥

॥ ರಾಗ ಭೈರವಿ ಏಕತಾಳ ॥

ಆರೆಲವೋಹುಲು ವೀರಾ । ನೀ । ಹಾರದಿರೀಪರಿವಾರಾ । ಸಾರದು ಮುಂದಕೆ ನಿನ್ನಾ । ಸಹಿ । ತೀರಸೆಗೊರಗಿಪೆ ಮುನ್ನಾ ॥ ೧ ॥ ಅಂಥವನಾರೈ ನೀನೂ । ಮತಿ । ವಂತ ಪ್ರಧಾನಿಯು ನಾನೂ । ನಿಂತಿರೆ ! ಜಾಗ್ರತೆರಣದೀ । ಕೊಂ । ದಂತಕಗೀವೆನು ಕ್ಷಣದೀ ॥ ೨ ॥ ನಂದಿವರ್ಮಾಂಕನು ನಾನೂ । ಕಾಂ । ಚೀಂದ್ರನನರಿಯೆಯ ನೀನು । ಸಿಂಧು ಸಹಸ ಪಟು ಭಟನೂ । ರಿಪು । ವೃಂದಕೆ ಭಯದಾರ್ಭಟನೂ ॥ ೩ ॥ ನೃಪತುಂಗನಜಾಮಾತಾ । ಅವ । ಗು



ಪಕರಿಸಲು ನೀ ನಿತ್ತಾ । ಕೃಪೆಗೈದೆಯ ಬಲು ಶೂರಾ । ಕಾಂ । ಬಪೆನಿಲು ಕೊಡು ಕೊಡು ಸಮರಾ ॥ ೪ ॥ ಕತ್ತಿಯ ಸೆಳೆಬಾಯೆಂದೂ । ಮುಂದೊತ್ತಿಯೆ ಕಾದುತನೊಂದೂ । ಮತ್ತಾ ಮಂತ್ರಿಯು ಹಿಂದೇ । ನಿಲೆ । ಸಿತ್ತನು ದಳಪತಿ ಮುಂದೇ ॥ ೫ ॥

॥ ರಾಗ ಭೈರವಿ ಝಂಪೆ ತಾಳ ॥

ಮಂತ್ರಿಯನು ಗೆದ್ದು ಬಲ । ವಂತನಾದುದು ವಿಫಲ । ಪಂಥವಿರೆಕಾದುದಳ । ಕಾಂತನಾ ಪ್ರಬಲಾ ॥ ೧ ॥ ದಳಪತಿಯು ನೀನಾದ । ರಳುಕನೀಕಲಿಯೋಧ । ಬಲುಮೆಯಿಂನೀಕಾದ । ಲಳಿವಿ ನಿರ್ವಾದ ॥ ೨ ॥ ಸಾಕು ಬಿಡು ಸಾಹಸದ । ಸಾಕಾರ ಮೂರ್ತಿಗಿದ । ನೇಕೆಂಬೆ ನಿನ್ನಮದ । ಠೀಕ ನಿಲಿಸುವೆನದಾ ॥ ೩ ॥ ಯಮನನೆನಪಾಯ್ತೆ ನಿನ । ಗಮಮ ಕಾಣುವಿಯವನ । ಸಮರ ಕಿಳಿಯೆನಲುರಣ । ಕ್ರಮ ಕೇಳೆ ಮುನ್ನಾ ॥ ೪ ॥

॥ ಭಾಮಿನಿ ॥

ಕಾದೆ ಬಹುವಿಧದಿಂದ ಕಾಂಚೀ । ಮೇದಿನಿಪ ನಿದಿರಿನಲಿ ನಿಲ್ಲಲು । ಸಾಧಿಸದೆ ಕೈಸೋತು ಜಾರೆಪರೇಶದಳಪತಿಯೂ । ಯೋಧರಾರಿನ್ನಿದಿರು ಬಹರೆಂ । ದಾಧರಾಧಿಪ ಘರ್ಜಿಸಲು ವೀ । ರಾಧಿ ವೀರರ ಗಂಡನೆನೆ ತಡದೆಂದ ಭೂತುಂಗಾ ॥ ೧ ॥

॥ ರಾಗ ಮಾರವಿ ಏಕತಾಳ ॥

ಸಂಗರದೊಳಗು । ತ್ತುಂಗನೊನೀಭೂ । ತುಂಗನು ನಾನಿಹೆನೂ । ಗಂಗೇಶನಸುತ । ತುಂಗಬಲಾನ್ವಿತ । ಗಂಗಾಧರ ಸಮನೂ ॥ ೧ ॥ ಈಶಗೆ ಸಮವೆಂ । ಬಾಸಹಸದ ಬಯ । ಲಾಶೆಯದೆ । ನ್ನರುಳೇ । ಈ ಸಮರದಿಜಯ ।



Scanned by CamScanner

ದೈಸಿರಿಪಡೆದು ಪ್ರ । ಕಾಶಿಸದೇ ಮರಳೇ ॥ ೨ ॥ ಅಂಥವನೀನೆಂ । ಬಂತ್ರೀ ಗರ್ವದ । ಪಂಥವು ಸಲದಿಲ್ಲೀ । ಸ್ವಂತಿಕೆಯಿ ಸ್ಪೆಂ । ಮಂಥವರಿರೆ ನಿನ । ಗಂತೂ ಜಯವೆಲ್ಲೀ ॥ ೩ ॥ ಆದಡೆ ಬಾನಿಲು । ಕಾದಾಡೆನ್ನೊಳು । ಸಾಧಿಪೆನಾ ಪಂಥಾ । ಆದರಿಸೆಂದೆನೇ । ಕ್ರೋಧದೊಳಿದಿರಿಸಿ । ಕಾದಿಯೆಗೆಲವಾಂತಾ ॥ ೪ ॥

॥ ಕಂದ ಪದ್ಯ ॥

ಗೆದ್ದಾ ಕಲಿಭೂತುಂಗಂ । ಯುದ್ಧಕ್ಕಿನ್ನಾರು ಬಪ್ಪರೆಂಬ ನಿತರೊಳಂ । ರುದ್ರನೊಯೆನೆಬಂಕಂ ಮುನಿ । ದೆದ್ದಾ ರೋಪದೆ ತಡೆಯುತಲವನೊಡನೆಂದಂ ॥ ೧ ॥

॥ ರಾಗ ಭೈರವಿ ಅಷ್ಟತಾಳ ॥

ಭೂತುಂಗನೋ ಭಳಿರೇ । ಕುಮಾರನೀ । ನೀತೆರಧೈರ್ಯವಿರೇ । ಬಾ ತೋರುವೆನು ಶೌರ್ಯ । ಆತುರಥರವಲ್ಲ । ವೇತಕೆರಣ ನಿನಗೇ ॥ ೧ ॥ ಬನವಾಸಿ ಮಾಂಡಲೀ ಕಾ । ನೃಪತುಂಗನ । ಘನಸೇನೆಯಧಿಪ ಬಂಕಾ । ಗುಣಯುತ ಬಲವಂತ । ನೆನುವುದ ಬಲ್ಲಂಥ । ವನೆ ನಾನು ನಿನಗಂಜೆನೂ ॥ ೨ ॥ ಮೆಚ್ಚುವ ಮಾತಹುದೂ । ಆದರು ನಿಂ । ನಿಚ್ಛೆಯು ಫಲಿಸದದೂ । ಹೆಚ್ಚೇಕೆ ನಿಮಿಷಾರ್ಧ । ಕೆಚ್ಚು ನಡೆಯದೆಮ್ಮೊ । ಳೆಚ್ಚರವಿರಲಿ ಮಗೂ ॥ ೩ ॥ ಗುಣಕೆ ಮತ್ಸರವಿಲ್ಲವೊ । ನಿನ್ನಯ ಸತ್ವ । ಘನತೆಗೆಭಯುಗೊಳ್ಳೆವೊ । ರಣ ಪಾಂಡಿತ್ಯವನೊಮ್ಮೆ । ಕೆಣಕಲರಿಗುಹೆಮ್ಮೆ । ಮಣಿಸದೆಮ್ಮನುಧುರದೀ ॥೪॥

॥ ರಾಗ ಭೈರವಿ ಏಕತಾಳ ॥

ಆದರೆ ನಿಲುನಿಲು ತರಳಾ । ನೀ । ಕಾದಲು ಕ್ಕೊವೆನು ಕೊರಳಾ ।



ಪೋದಪುದೊಳ್ಳಿತು ಹಿಂದೇ । ಪಿತ । ನೇಧುರಕೊ ಗದಗಲಿ ಮುಂದೇ ॥ ೧ ॥ ಮೆಟ್ಟಿಲ ನೇರಿಯೆ ಸಭೆಗೆ । ಅಡಿ । ಯಿಟ್ಟರೆ ಕಾಂಬುದು ಸೊಬಗೇ । ಕಟ್ಟಳೆಯಿದುಜೈಸೆನ್ನಾ । ಮ । ತ್ತೃಷ್ಟರಲಿದಿರಿಸಿಪಿತನಾ ॥ ೨ ॥ ಬಂಕೇಶನು ಕನಲುತ್ತಾ । ಬಾ । ಯ್ಬಿಂಕವಬಿಟ್ಟೇಳೆನುತಾ । ಝೇಂಕಾರದಿರಣಕೊದಗೇ । ಅವ । ಶಂಕಿಸದೇಯಿದಿರಾಗೇ ॥ ೩ ॥

॥ ಭಾಮಿನಿ ॥

ತರಳರಿರಲಾಲಿಸಿರಿ ಮತ್ತಾ । ಧುರದ ಬಗೆಯನ್ನೇನನೆಂಬೆನು । ಧರಣ ಕಂಪಿಸೆ ಹಳಚೆನಾನಾ ವಿಧದಿ ಭೂತುಂಗಾ । ಶರಣನಾಗಲು ಬಂಕನಧಟಿಗೆ । ಪರಿಕಿಸುತ ಪ್ರಳಯಾಂತರುದ್ರನ । ಪರಿಯೊಳೆದ್ದಾಗಂಗಭೂಪೋ । ತ್ತುಂಗ ತಡೆದೆಂದಾ ॥ ೧ ॥

॥ ರಾಗ ಶಂಕರಾಭರಣ ಮಟ್ಟೆ ತಾಳ ॥

ಭಳಿರೆಬಂಕ ನಿನ್ನಬಿಂಕ । ಬಲುಮೆಯೋರಿತಲ್ಲ ಮಿೂರಿ । ಸಲದು ನಮ್ಮ । ಕೆಣಕೆಹಮ್ಮ । ನಿಲಿಪೆತಕ್ಷಣಾ ॥ ೧ ॥ ನೀತಿಮಾರ್ಗ ನಿನ್ನಮಾರ್ಗ । ನೀತಿ ನ್ಯಾಯ ಮಿೂರಿ ಗಡಿಯ । ನೇತಕೊತ್ತಿ ಬಂದೆ ಕತ್ತಿ । ಭೀತಿಗೊಳಿಸಿದೇ ॥೨॥ ಭೀತಿಗೊಳಿಸಲಿಹುದು ಸಹಸ । ನೀತಿನಿಯಮಕೇಳಲ್ಲಮಮ । ನೀತ ಯೂರೆ ನಿನಗೆ ಸಾರೆ । ಏತರಧಿಕತೀ ॥ ೩ ॥ ಚಕ್ರವರ್ತಿ ಕೇಳೆ ಪೂರ್ತಿ । ಹಕ್ಕನಿತ್ತು ಕಳುಹೆ ಹೊತ್ತು । ತಕ್ಕುದೆಸೆಗೆ ಬಂದೆ ನಿನಗೆ । ದಕ್ಕದೆಂದಿಗೂ ॥ ೪ ॥ ರಾಷ್ಟ್ರಕೂಟನೃಪಸಾಮ್ರಾಟ । ಪಟ್ಟ ಭದ್ರಹಕ್ಕು ಛಿದ್ರ । ಪಟ್ಟಪಾಡ ನಿನಗೆ ನೋಡ । ಲಷ್ಟು ಕಾಣಿಸೆ ॥ ೫ ॥ ಅಷ್ಟು ಕಾರ್ಯವೆಸಗೆ ಶೌರ್ಯ । ದಿಟ್ಟತನವು ನಿನಗೆ ಸಲವು । ಕೊಟ್ಟು ಕಪ್ಪ ತಪ್ಪ ನೊಪ್ಪ । ಲೊಟ್ಟೊ ಸುಗಮವೂ ॥೬॥ ಮಾತದೇಕೆ ಬರಿದೆ ಜೋಕೆ । ಭೀತಿ ಬಿಟ್ಟು ಯುದ್ಧಗೊಟ್ಟು । ನೀತಿ ಧರ್ಮ ನಿಯಮ ಕರ್ಮ । ರೀತಿಯರಿತುಕೋ ॥ ೭ ॥



Scanned by CamScanner

॥ ರಾಗ ಭೈರವಿ ಏಕ ತಾಳ ॥

ಗಂಗೇಶನೆ ತಿಳಿತಿಳಿದೂ । ನೀ । ಸಂಗರವೆನ್ನುತಲಳಿದೂ । ಭಂಗಿಸಿ
ಕೊಂಬುದದೇಕೇ । ಸಮ । ರಾಂ ಗಣದಲಿ ನಾ ನಳುಕೇ ॥ ೧ ॥ ಆದರೆ
ಮತ್ತೂ ಮತ್ತೂ । ನೀ । ನೋಡುವದೇನನು ನಿತ್ತೂ ॥ ಕಾದುವೆ ನಿದೊ
ಬಾ ಮುಂದೇ । ಭಯ । ನಾದರೆ ನಡೆಯ್ಯೆ ಹಿಂದೇ ॥ ೨ ॥ ನಡೆವೆನು ನಿನ್ನನು
ಕೊಂದೇ । ಎಂ । ದೊಡನನುವಾಗಲು ಮುಂದೇ । ನಡೆದುದು ಘನ ಸಂಗ್ರಾ
ಮೂ । ಧರೆ । ಪುಡಿ ಮುಸುಕಿತು ಭೂವ್ಯೋಮಾ ॥ ೩ ॥

॥ ವಾರ್ಧಿಕ್ಯ ॥

ಈ ತೆರದಿ ಘನ ಘೋರ ಸಂಗ್ರಾಮವಾಗೆ ಬಳಿ । ಕಾತುಮುಲ
ಯುದ್ಧದಲಿ ನೀತಿಮಾರ್ಗಂ ಬಳಲಿ । ಸೋತು ಬಲ ಸಹಿತ ಕಾವೇರಿ ಮೇ
ರೆಯು ಹಿಂದೆ ದಾಟು ತೋಡಲು ಭಯದಲೀ । ಖ್ಯಾತ ದಳಪತಿ ಬಂಕ ವಿಜ
ಯದಿಂದಿರಲತ್ತ । ಲಾತಂತ್ರ ಮೂರ್ತಿ ಶಂಕರ ಗಣಂ ಸೈನ್ಯ ಸಹಿ । ತಾತುರ
ದಿ ಕೃಷ್ಣ ಮುಗಿಯುರೊಡನೆ ಗಡನಾಡ ಕಿರಣಪುರಕ್ಕೈ ತಂದನೂ ॥ ೧ ॥

॥ ರಾಗ ಕೇದಾರಗೌಳ ಅಷ್ಟ ತಾಳ ॥

ಮಾನ್ಯ ಖೇಟವ ಮುತ್ತ । ಲೆನ್ನುತಲುನ್ನತ । ಸೈನ್ಯ ಸಂಗ್ರಹದೊಳಿ
ರೇ । ಅನ್ಯಾಯಮತಿ ಮುಂಗಿ । ಕರ್ನಾಟಕವ ನುಂಗಿ । ತನ್ನಾಪ್ತ ಗಂಗೇಶರೇ
॥ ೧ ॥ ಚಕ್ರವರ್ತಿತ್ವದ । ಹಕ್ಕಸ್ಥಾಪಿಸುವುದ । ಕಿಕ್ಕಿದ ತಂತ್ರವದಾ । ದಕ್ಕಿ
ಸಿಕೊಳುವರೆ । ಲೆಕ್ಕನಿ ಕಾಯ್ದಿರೆ । ಕೊಕ್ಕರೆಯಂತೆಸೆದಾ ॥ ೨ ॥ ಬಂತೀಗ
ಸರಿ ಹೊತ್ತೆಂ । ಬುಥಯೋಚನೆ ಹೊತ್ತೆ । ತಂತ್ರದಿ ಸಖಕೃಷ್ಣನಾ । ಮುಂ
ತೆ ಕೊಲ್ಲಿಪೆನೆಂದು । ಅಂತರಂಗದಿ ಬಂಗು । ಪಂಥದೊಳಾಕ್ರಪಣಾ ॥ ೩ ॥

॥ ಕಂದ ಪದ್ಯ ॥

ಪದುಮಲೆಯೆನ್ನುವ ವೇಶ್ಯೆಯು । ಸದನವ ಪೊಗಲವಳಿದೇನು ಬಡವ



ಳ ಭಾಗ್ಯಂ । ಪದ ಸಂಪರ್ಕವನೀ ಗೃಹ । ಕೊದಗಿಸಿದುದುಯೆಂದು ಸತ್ಕರಿ
ಸಲವನೆಂದಂ ॥ ೧ ॥

॥ ರಾಗ ಕಲ್ಯಾಣಿ ಏಕತಾಳ ॥

ಕೇಳುಪದ್ಮಲೆಯೆ ಮಾತಾ । ನೀ ನೊಳ್ಳೆ ವಿ । ಶಾಲ ಸದ್ಗುಣಿಯೆನು
ತಾ । ಆಲೋಚಿಸುತ ಬಂದೆ । ಪೇಳುವೆ ನಿನಗೆಂದೆ । ಕೇಳಿ ಮಾಡಲು ಮುಂ
ದೆ । ಬಾಳುವಿ ಸುಖದಿಂದೇ ॥ ೧ ॥ ಬಡವಳಿಂದೇನಾದೀತೂ । ಮಹಾ
ಸ್ವಾಮಿ । ಯಡಿಸೇವೆಯೇ ಹೊರತೂ । ಒಡೆಯರಿಗೀ ದೇಹ । ಮುಡುಪ
ಲ್ಲವೇ ದಾಹ । ವಡಗಿಸಿದರೆ ದ್ರೋಹ । ಕೆಡೆಯಿಲ್ಲ ವಿಡಿಸ್ನೇಹ ॥ ೨ ॥
ಸರಿ, ತಾಳು ನಿನ್ನ ಪುತ್ರೀ । ವಿಶಾಲಿನಿ । ಗಿರುವುದು ಭಾಗ್ಯ ಖಾತ್ರೀ । ನರ
ಪತಿ ನೃಪತುಂಗ । ತರಳಕೃಷ್ಣನ ಸಂಗ । ದೊರೆಯಿಸಿ ಹೊಸ ರಂಗ । ಸ್ಥಿರ
ಗೈವುದೆನ್ನಂಗ ॥ ೩ ॥ ಅಂಥ ಪುಣ್ಯವು ನಮಗೇ । ತಮ್ಮಿಂದಾಗಿ । ಬಂತೆಂದಾ
ದರೆ ತಮಗೇ । ನಿಂತು ಪ್ರದಕ್ಷಿಣೆ । ಯಾಂತೇ ದಕ್ಷಿಣೆ । ಸಂತರ್ಪಣೆ ಹೊಣೆ ।
ಸ್ವಂತನಿರ್ವಹಣೆ ॥ ೪ ॥ ಕರೆಸಾದರವಳನೀಗಾ । ಕಾಣುವೆನೊಮ್ಮೆ । ಭರ
ತ ನರ್ತನದ ಯೋಗಾ । ಬರಿಸೆನೆ ಮಗಳು ಬಂ । ದೆರಗುವಂತೆಸಗಿಬಂ ।
ಧುರೆಗೆಲ್ಲವೆನೆ ಕುಣಿ । ದರೆ ಮೆಚ್ಚಿದನುದಣಿ ॥ ೫ ॥

॥ ಕಂದ ಪದ್ಯ ॥

ನಂದನವನದೊಳ್ ಸಂಜೆಗೆ । ಸಂಧಿಸು ಬರುವನು ಕುಮಾರನೊಲಿಸಿ
ಕೊಯೆನುತ್ತಂ । ಎಂದವ ತೆರಳಲ್ ಸಮಯಕೆ । ಬಂದರೆ ಕಂಡಿವನ ವಿಶಾಲಿ
ನಿಯು ಬೆರಗಾಂತಳ್ ॥ ೧ ॥

॥ ರಾಗ ತೋಡಿ ರೂಪಕ ತಾಳ ॥

ಕಂಡಳಡಗಿ ನಿತ್ತು ಕೃಷ್ಣನಾ । ವಿಶಾಲಿನೀಯು । ಕಂಡಳಡಗಿನಿತ್ತು

ಕೃಷ್ಣನಾ । ಕಂಡಳಡಗಿನಿತ್ತು ಮೆಚ್ಚಿ । ಕೊಂಡಳ ಮಮ ಬಾಲ ಮಾ । ತಾ೯ಂಡ ತೇಜ ರಾಜಕುವರ । ಗಂಡುಸರಲೆ ಶ್ರೇಷ್ಟನಹುದು ॥ ೧ ॥ ಬ್ರಹ್ಮದೇವನಿವನ ಸೃಷ್ಟಿಸೀ । ಕೈಚಳಕಕಾಗಿ । ಹೆಮ್ಮೆಗೊಳ್ಳದಿರನು ದೃಷ್ಟಿಸೀ ಕಮ್ಮಗೋಲ ಸಹಿತ ಹೋಲ । ನಿಮ್ಮಡಿಗಿಮ್ಮಡಿಗು ಮೇಲ । ನೆಮ್ಮುವೀ ನೃಪಾಲ ಬಾಲ । ಸಮ್ಮತಿಸಲು ಭಾಗ್ಯ ಪ್ರಬಲ ॥ ಕಂಡಳಡಗಿ ॥ ೨ ॥ ಎಲ್ಲದಕ್ಕು ಬೇಕು ಪುಣ್ಯವೂ । ಪಡೆದ ಮಾತೇ । ಸಲ್ಲಿಸೀದ ಹರಕೆ ಗಣ್ಯವೂ । ಸೊಲ್ಲಿಸುವುದಿನ್ನೇನು ತ್ರಾಣ । ವಿಲ್ಲತಾಗಿ ಪುಷ್ಪ ಬಾಣ । ಸಲ್ಲಿಸಿಯೆ ಪ್ರಣಾಮ ಪ್ರಾಣ । ನಿಲ್ಲಿಸೆಂಬೆ ಪೊರೆವ ಜಾಣ ॥ ಕಂಡಳಡಗಿ ॥೩॥

॥ ಕಂದ ಪದ್ಯ ॥

ಇಂತೆಂದೆಣಿಸಿ ವಿಶಾಲಿನಿ । ನಿಂತಲ್ಲಿಂದೈದು ತಾಕ್ಷಣ ಮಣಿಯೆಕೃಷ್ಣಂ । ಕಂತುವಿ ನರಗಿಣಿಯೋ ಯೆಂ । ಬಂಧವಳಿವಳಾರಿದೆಂದು ಬೆರಗಾಂತೆಂದಂ ॥೧॥

॥ ರಾಗ ಬೇಗಡೆ ಏಕತಾಳ ॥

ಆರರೆ ನೀನಾ । ರಾರಿಯೆನೆಲೆ ಬಾಲೇ । ಸನ್ಮೋಹಿನೀ ಬಂ । ದೆರಗಿರುವ ಬಗೆ । ಯರುಹು ಶಶಿ ಫಾಲೇ । ಪರಿಮೆಗುರುಳಿನ । ಪಿರಿಮೆಯೇನ್ನುಕ । ತರವು ಛಂದ್ರನ । ತೆರದ ಸೊಗಸಿನ । ಸಿರಿಗೆ ಸರಿಯೆನ । ಲರಸಲೇ ಮನ । ಬರದದೇಕೆನ । ಲಿರದ ಕಾರಣ ॥ ೧ ॥ ಧನ್ಯೆ ನೀವೀ । ಗೆನ್ನ ಮೆಚ್ಚಿದರೇ । ಅನಾಥೆಯಿರ್ಪೆನು । ಮನ್ನಿಸಿಯೆ ಸಂ । ಪನ್ನನೆಚ್ಚಿದರೇ । ಜನ್ಮ ಪಾವನ । ವೆನ್ನ ಜೀವನ । ವನ್ನು ಕಾವೆನ । ಪುಣ್ಯ ದೇವನ । ಬಣ್ಣಿಸಲೆ ಮನ । ಕಿನ್ನು ಸಿಗದೆನ । ಲೆನ್ನಲೇ ನ್ಯೂನ । ಮನ್ನಿಪುದೆಗುಣ ॥ ೨ ॥ ಚಂದವಾಯ್ತೆಲೆ । ಸುಂದರಿಯೆ ಕೇಳೂ । ವೈವಾಹಿತನುನಾ । ನೆಂದು ತಿಳಿಯದೆ । ಬಂದೆಯೂ ಹೇಳೂ । ಅಂದರೆನ್ನನು । ಹೊಂದೆ ನಿನ್ನನು । ಮುಂದೆ ಸುಖವನು । ತಂದು ಮನವನು । ಅಂದವಿಡುವನು । ವೊಂದಕಾಣೆನು । ಎಂದೀ ಮಾತನು । ನೊಂದೇ ನುಡಿವೆನು ॥ ೩ ॥



॥ ಭಾಮಿನಿ ॥

ಅದಕೆ ಚಿಂತಿಸಬೇಡಿ ಸವತಿಯು । ಹೃದಯಕಾನಂದವನು ತರುವೆನು । ಪದವ ಬಿಡೆ ಬಿಡೆನೆಂದು ಕಣ್ಣೀರಿಡಲು ಕಾಣುತ್ತಾ । ಮೆದುವದಾಯ್ತೂ ಕೃಷ್ಣನಿಗೆ ಮನ । ಮುದದೊಳೆತ್ತುತಲವಳ ನಿನ್ನನು । ಬದಲು ಗೃಹದೊಳಗಿಟ್ಟು ಕಾವೆನೆನುತ್ತಲೊಪ್ಪಿದನೂ ॥ ೧ ॥

॥ ರಾಗ ಶಂಕರಾಭರಣ ತ್ರಿವುಡೆ ತಾಳ ॥

ಇಂತು ಸಂತೈಸುತ್ತ ಕೃಷ್ಣ ಮ । ಹಾಂತ ಮಹಲಿನೊಳವಳನಿರಿಸುತ । ಲಂತರಂಗದಿ ಸುಖಿಸು ತಿರ್ದನು । ಸಂತಸದಲೀ ॥ ೧ ॥ ಮುಂಗಿಯ ನಿತರೊಳ್ತಂನ ತಂತ್ರಪ್ರ । ಸಂಗ ಫಲಿಸುವ ಹೊತ್ತು ಬಂತೆಂ । ಬಂಗವರಿತೇ ಪೇಳ್ದ ಪದ್ಮಲೆ । ಗಿಂಗಿತವನೂ ॥ ೨ ॥ ಕೇಳು ಪದ್ಮಲೆ ನಿನ್ನ ಮಗಳು ವೀಶಾಲಿನಿಗೆ ದೊರಕಿರುವ ಭಾಗ್ಯವು । ಬಾಳುವಂತಾನೊಂದು ಯುಕ್ತಿಯ । ಪೇಳಲಿಹೆನೂ ॥ ೩ ॥ ಸತ್ಯ ಸಂಗತಿ ತಿಳಿಯೆ ಕೃಷ್ಣನ । ಪತ್ನೀ ಪತಿಗುಪದೇಶಗೈದು ಪ್ರ । ಯತ್ನದಿಂದಿವಳಿಂದಲಗಲಿಸೆ । ರತ್ನ ರಾಶೀ ॥ ೪ ॥ ಮತ್ತೆ ನಿನ್ನ ಕುಮಾರಿಗಿಲ್ಲದೆ । ವ್ಯರ್ಥ ಬಳಲುವುದಕ್ಕೆ ಮೊದಲೇ । ಯತ್ನದಿಂದ ನಿವಾರಿಸಲಿಕಿದೊ । ಯುಕ್ತಿ ಪೇಳ್ವೇ ॥ ೫ ॥ ನಡೆಸಬೇಕದರಂತೆ ನಿನಗಾನ್ । ಕೊಡುವೆ ನೀಗಂಟೊಂದ ಮೆಚ್ಚುಗೆ । ಪಡೆಯೆ ಸಂಭಾವನೆಯನೆಣಿಸಿಯೆ । ಇಡುವದೊಳಗೇ ॥ ೬ ॥ ಎಂದಿಗೂ ನಾ ನಿನ್ನ ಮರೆಯೆನು । ಮುಂದಕಾನಿಹೆನೆಲ್ಲದಕುಪಿಡಿಯೆಂದು ಗಂಟನು ಕೊಡಲು ಪಡೆದಾ । ನಂದದಿಂದಾ ॥ ೭ ॥

॥ ರಾಗ ಸುರುಟಿ ಏಕತಾಳ ॥

ಎಣಿಸಿದಳೆಣಿಸಿದಳೂ । ಪದ್ಮಲೆ । ಎಣಿಸಿದಳೆಣಿಸಿದಳೂ । ಎಣಿಸಿಯೆಣಿಸಿಘನ । ಪಣಿ ಚಿನ್ನದ ಹಣ । ಗಣಿತಕರಿಯಮಣ । ವೆನಲಿಹ ಲಕ್ಷಣ ॥ ೧ ॥ ಮಂಗಿ ಸ್ವಾಮಿ ನಿಮ್ಮಾ । ಹಣ ಋಣ । ಹಂಗಿಗೆನ್ನ ಕರ್ಮ । ಸಂ

ಗಮವಾದುದು । ಸಂಗತಿಯೇನದು । ಅಂಗವರಿಯಲಿದು । ಭಂಗವೆಂದಾಗದು ॥ ೨ ॥ ನುಡಿಯಿರದನು ಮಾಳ್ಪೇ । ಅಪ್ಪಣೆ । ಕೊಡಿರೆಂದಿಗು ತಪ್ಪೇ । ಬಡವಳು ತಮ್ಮಯ । ಅಡಿಸೇವೆಗೆ ಭಯ । ಪಡದೇ ಸಂಶಯ । ವಿಡದೆಸಗುವೆ ಜಯ ॥ ೩ ॥

॥ ಭಾಮಿನಿ ॥

ಪಿಡಿಯಿದನು ನೀ ಮಗಳ ಮುಖದಿಂ । ಕೊಡಿಸು ಹಾಲಿಗೆ ಬೆರೆಸಿ ನೃಪಸುತ । ಗೊಡನೆ ಸಾವನು ವಿಷದ ಪುಡಿಯಿದು ಬಳಿಕ ನಿಮಗೆಲ್ಲಾ । ಪಡೆಯಬಹುದಾ ಮಹಲು ಸಹಿತಲೆ ನುಡಿಯಲಿನ್ನೆರಡಿಲ್ಲವೆಂದವ । ನೊಡಬಡಿಸಿ ತೆರಳಲ್ಕೆ ಪದ್ಮಲೆ ಮಗಳ ಕರೆಸಿದಳೂ ॥ ೧ ॥

॥ ರಾಗ ನವರೋಜು ಏಕತಾಳ ॥

ಬಾರಮ್ಮಾ ಬಾ ಮಗಳೇ । ಗುಣ । ಸಾರೇ ಮೋಹದ ಮುಗುಳೆ । ನಾರಿಕುಲಾಂಬುಧಿ । ತಾರಾಪತಿಯಧಿ । ಕಾರದಿ ನೆಮ್ಮದಿ ಗೇರಿಹೆ ಹರ್ಷದಿ ॥ ೧ ॥ ಎಂದೆಂದೂ ಸುಖವಾಗೀ । ಇ । ಪ್ಪಂದಕೆ ನಾ ಮನಬಾಗೀ । ಎಂದಪೆನೀನುಡಿ । ಯೊಂದ ನಿದೋಪಿಡಿ । ಚಂದದೊಳೀ ಪುಡಿ । ಕುಂದದೆ ಜಯಪಡಿ ॥ ೨ ॥ ವಿಷವಿದನೂ ಮುಂಗೀಶಾ । ಕೊ । ಟ್ಟುಸುರಿದ ಮಾತುವಿಶೇಷಾ । ರಸೆಯರಸನಸುತ । ಗೊಸಗೆಲಿಕುಡಿಸುತ । ತುಸು ಹಾಲಲಿಹಿತ । ವೆಸಗಿದೇ ಸಮ್ಮತ ॥ ೩ ॥

॥ ರಾಗ ದೇಶಿ ಅಷ್ಟತಾಳ ॥

ಏನಮ್ಮಾ । ಇಂಥಾ । ದ್ದೇನಮ್ಮಾ । ಏನಮ್ಮ ನೀನೆಲ್ಲ ತಿಳಿದವಳಾಗೀ । ಹೀನಕಾರ್ಯವ ಪೇಳ್ವೆ ಬುದ್ಧಿಯ ನೀಗೀ । ನಾನೆಷ್ಟಕೂಮಾಡೆ ಹಣ



ದಾಸೆಗಾಗೀ । ಆನೊಳಂಬೇಶನ ಹಂಗಿಗೆ ಬಾಗಿ ॥ ಏನಮ್ಮಾ ॥ ೧ ॥ ಮಡದಿಗಿಂತಲು ಹೆಚ್ಚು ಪ್ರೀತಿಯಿಂದೆನ್ನಾ । ನುಡಿನಡೆಯಿಂ ಕಾಂಬ ಪುಣ್ಯಾತ್ಮನವನಾ । ಕೆಡಹೆನು ಮೋಸದೊಳವ ಭಾಗ್ಯರನ್ನಾ । ಬಿಡು ಬಿಡು ಯೋಚನೆ ತರ್ಕ್ಕೋ ಸುಜ್ಞಾನಾ ॥ ಏನೆಂದೇ ॥ ೨ ॥

॥ ರಾಗ ಕೇದಾರ ಗೌಳ ಝಂಪೆ ತಾಳ ॥

ಮಗಳೆ ನೀ ಮುಗ್ಧೆಯಿನ್ನೂ । ತಿಳಿಯೆಯಿ । ಜಗವು ಹೇಗೆಂಬುದನ್ನೂ । ಸಿಗುವ ಸೌಭಾಗ್ಯಗಳನೂ । ಕಳಕೊಂಬ । ಬಗೆಸಲ್ಲ ಯೋಚಿಸದನೂ ॥ ೧ ॥ ಯೋಚಿಸಿಯೆ ನುಡಿದೆನಮ್ಮಾ । ಸತ್ಯನ್ಯಾ । ಯಾಚಾರ ವಿಹುದೆ ಧರ್ಮಾ । ಆ ಚಕ್ರವರ್ತಿಸುತನಾ । ಕೊಲುವಂಥ । ನೀಚ ಕಾರ್ಯವ ಮಾಡೆನಾ ॥ ೨ ॥ ಬಡವರನುಸುಲಿಗೆ ಗೈದೇ । ರಾಜತ್ವ । ಪಡೆದರೆಂಬುದನರಿಯದೇ । ನುಡಿಯದಿರು ಮುಂಗಿಯಣ್ಣಾ । ನಮ್ಮ ಕೈ । ಬಿಡನವನ ಗುಣಸುವರ್ಣ ॥ ೩ ॥ ನಂಬಬೇಡವ ತಂತ್ರ ಮೂರ್ತೀ । ಏನೇನೋ । ಹಂಬಲಿಪ ಕಾರ್ಯಸ್ಫೂರ್ತೀ । ಕಾಂಬಂತೆ ತಿಳಿಯಬೇಡಾ । ಸಭ್ಯತೆಯ । ಡಾಂಭಿಕನು ಮನವೆಗೂಢಾ ॥ ೪ ॥ ಅವರನೀಹಳಿವೆಯಲ್ಲಾ । ಸಾಕ್ಷಾತ್ । ಶಿವನೆ ಸರಿಬಲ್ಲೆನೆಲ್ಲಾ । ವಿವರ ತಿಳಿ ವಾದಸಲ್ಲಾ । ಆ ರಾಜ । ಕುವರಗೆತ್ತೆದಿರು ಸೊಲ್ಲಾ ॥ ೫ ॥

॥ ಭಾಮಿನಿ ॥

ಹಣ ಪಿಶಾಚಿಯು ಸೋಕಿತಿವಳಲಿ । ಘನವಿಮರ್ಶೆಯು ಸುಮ್ಮನೆಂದವ । ಳೆಣಿಸಿ ಯೋಚಿಸುತೊಂದು ತಂತ್ರವ ವಿಷದ ಪುಡಿ ಪಡೆದೂ । ಕ್ಷಣದೊಳೈದು ತಲೆಲ್ಲವನು ನೃಪ । ನಣುಗಗರುಹಲ್ಕವನು ಮೆಚ್ಚುತ । ಗುಣದಿ ದೇವತೆ ನೀನೆನುತ ಪಿಡಿದಪ್ಪುತಿಂತೆಂದಾ ॥ ೧ ॥



Scanned by CamScanner

### ॥ ರಾಗ ನವರೋಜಿ ಏಕತಾಳ ॥

ಮೆಚ್ಚಿದೆ ಮೆಚ್ಚಿದೆ ನಿನ್ನಾ । ಮನ । ಸ್ವಚ್ಛತೆ ಪುತ್ಥಳಿ ಚಿನ್ನಾ । ಅಚ್ಚರಿಯುಚ್ಚರಿ । ಕೆಚ್ಚಿದೆಯೋ ಸರಿ । ತುಚ್ಛರ ಬಗೆಗುರಿ । ಗೆಚ್ಚರ ವಾಯ್ತರಿ ॥ ಮೆಚ್ಚಿದೆ ॥ ೧ ॥ ದುಷ್ಟನ ಕಾರ್ಯಕೆ ತಕ್ಕಾ । ಫಲ । ಮುಟ್ಟಿಸಲಿಪ್ಪುದು ತವಕಾ । ಥಟ್ಟನೆ ಪೋಗುತ । ಕೊಟ್ಟಾಯ್ತೆನ್ನುತ । ದೃಷ್ಟಿಸಲಭಿಮತ । ಹುಟ್ಟಿಸಿ ಕರೆತಾ ॥ ಮೆಚ್ಚಿದೆ ॥ ೨ ॥ ಮಲಗುವೆನು ಸೋಗಿನಲೀ । ಅವ । ತಿಳಿಯಲು ನೋಡಲು ಬರಲೀ । ಬಳಿ ಬಂದರೆ ಬಿಡೆ । ಬಲಿಯಪ್ಪನು ನಡೆ। ಗೆಲುವಕ್ಕೆಂದೊಡೆ । ತೊಲಗಿದಳಾಕಡೆ ॥ ಮೆಚ್ಚಿದೆ ॥ ೩ ॥ ಸಾಗಲಾಕ್ಷಣ ಮಂಗೀ । ಅವ । ಆಗಮಿಸೇ ಮನಹಿಂಗೀ । ಹೇಗಾಯ್ತೆನೆ ಸರಿ । ಯಾಗಿ ದೆಕಾಂಬಿರಿ । ಸಾಗಿದಡರಿವಿರಿ । ಭೋಗಿಸಲೈಸಿರಿ ॥ ಮೆಚ್ಚಿದೆ ॥ ೪ ॥

### ॥ ಕಂದ ಪದ್ಯ ॥

ಕಂತ್ರಂ ಫಲಿಸಿತೆನುತ್ತಂ । ಸಂತಸದಿಂ ಮಂಗಿಹಿಂಗಿ ಹೊರಟವಳೊಡನಂ । ಕಾಂತಾಮಹಲಂ ಸೇರುತ । ನಿಂತಾಮಂಚದಿ ಮಲಗಿದನಂ ನಿರುಕಿಸಲುಂ ॥ ೧ ॥

### ॥ ರಾಗ ಸೌರಾಷ್ಟ್ರ ತ್ರಿವುಡೆ ॥

ಏನನೆಂಬೆನು ತಕ್ಷಣದಿ ನೃಪ । ಸೂನುಸಿಡಿದೆದ್ದವನ ಪಿಡಿಯುತ । ಗೋಣಕ್ಕೊಯಲೆಣಿಸುವನಿತರೊ । ಆನೊಳಂಬಾ ॥ ೧ ॥ ಸಾರಿ ಹಿಂದಕೆ ಚಿಕ್ಕ ಕತ್ತಿಯ । ತೂರೆ ಮುಂದಕೆ ನಿಮಿಷ ಮಾತ್ರದಿ । ಹಾರಿ ಗುರಿಗೆದೆಗೊಟ್ಟಳಾವೈ । ಯಾರೆ ನೀರೇ ॥ ೨ ॥ ದೊಪ್ಪನುರುಳೆವಿಶಾಲಿನಿಯು ಗುರಿ । ತಪ್ಪಿ ಬದುಕಿದ ಕೃಷ್ಣನಾಕಂ । ದರ್ಪ ಹರನೋಲ್ಕನಪುತೆದ್ದತಿ । ದರ್ಪದಿಂದಾ ॥ ೩ ॥ ಕತ್ತಿಯನು ಝಳಪಿಸುತ ಮಂಗಿಯ । ಕತ್ತ ಕತ್ತರಿಸುವರೆ ಬರೆ ಕಾ । ಣುತ್ತಲೋಡಲು ತೊಡಗಿದನು ಭಯ । ಪೆತ್ತು ಮಂಗೀ ॥ ೪ ॥ ದುಷ್ಟ



ನಿಲು ನಿಲ್ಲೆನುತಲೇ ಬೆಂ । ನ್ನಟ್ಟಿ ನೃಪ ಸಂಭವನು ಬರೆಹಾ । ಕೆಟ್ಟೆನೆಂದಾ ಪಾಪಿಕೋಟೆಯು । ಮೆಟ್ಟಿಹಾರೇ ॥ ೫ ॥

### ॥ ಭಾಮಿನಿ ॥

ಮಕ್ಕಳಿರನೀವ್ಕೇಳಿ ಪಾಪಿಗೆ । ತಕ್ಕ ಪ್ರಾಯಶ್ಚಿತ್ತವಾಗದೆ । ದಕ್ಕಲುಂಟೇ ಮಂಗಿಯುರುಳಿದ ಭರಕೆ ಮಡಿದೊರಗೇ । ಫಕ್ಕನಾನೃಪತುಂಗನಾತ್ಮಜ । ಶಿಕ್ಷೆ ಸರಿಯಾಯ್ತೆವಗೆನುತ ಹಿಂ । ದಕ್ಕೆ ಸರಿದು ವಿಶಾಲನಿಯ ಬಳಿ ಬಾಗಲುಸುರಿದಳೂ ॥ ೧ ॥

### ॥ ರಾಗ ಮಧ್ಯಮಾವತಿ ಏಕ ತಾಳ ॥

ಬಂದಿರಾ ಸ್ವಾಮಿ ಕಣ್ತುಂಬ ನೋಡುವೆನೂ । ಅಂದವಾಯ್ತೆನಗೀಗ ನಿಮಗಾಗಿ ನಾನೂ । ಸಂದರ್ಭಕೊದಗಿದ ತೃಪ್ತಿಯಿಂದಿಹೆನು । ಮುಂದಪ್ಪಣೆಯನು ಪಾಲಿಸಿರಿ ಪ್ರಾರ್ಥಿಪೆನೂ ॥ ೧ ॥ ಕೆಲವೇ ಸಮಯವಾದರು ತಮ್ಮ ಸೇವೇ । ಫಲಿಸಿದುದೀ ಬಡವಳ ಭಾಗ್ಯದೂಲವೇ । ಅಳಲ ಬೇಡಿರಿ ನಾನು ಜೊತೆಗೆ ತುಂಬಿರುವೇ । ಮಲಗಿಸಿರೀ ತೊಡೆಯೊಳೆ ಶಾಂತಿಗೊಳುವೇ ॥ ೨ ॥ ಮಂಗಿಗೆ ಸರಿಯಾದ ಶಿಕ್ಷೆಯೊಯ್ತಲ್ಲಾ । ಸಂಗಾತಿ ನಾಗೈದ ತಪ್ಪಿರಲೆಲ್ಲಾ । ಸಂಗತಿ ಮರತೆನ್ನ ಮನ್ನಿಸಿ ನಲ್ಲಾ । ಮಂಗಳವಾಗಲಿ ನಿಮಗೆಲ್ಲ ಬರಲಾ ॥ ೩ ॥

### ॥ ವಾರ್ಧಿಕ್ಯ ॥

ನಿನ್ನಂಥ ವೀರರಮಣಿಯರಿಂದಿರಲೀ ನಮ್ಮ । ಕನ್ನಡಾಂಬೆಯುವದನ ಕಮಲ ವಿಕಸಿತ ವಾಯ್ತು । ಧನ್ಯ ನೀನೆನನಗಾಗಿಯೆಂಥ ತ್ಯಾಗವ ಗೈದೆ ಇದನೆಂದಿಗೂ ಮರೆವೆನೇ । ಜನ್ಮ ಸಾರ್ಥಕ ಗೊಳಿಸಿಕೊಂಡೆ ನೀ ಬಗೆ ಕಂಡೆ । ಕಣ್ಣೀರು ಸುರಿದರಾಹನಿಹನಿಗು ಮೌಕ್ತಿಕ್ಕದ । ಹೊಸ್ನ ಬೆಲೆ ಮಣಿವೆನೆಲೆ ಮನದನ್ನೆ ಮಾನ್ಯೆ ಭಲೆ ಭಲೆ ಭಾಗ್ಯವಂತೆ ಕಾಂತೇ ॥ ೧ ॥



Scanned by CamScanner

|| ಕಂದ ಪದ್ಯ ||

ಇಂತಾನೃಪಸುತ ದುಃಖಿಸೆ । ಶಾಂತಿಯ ಹೊಂದಿಯೆ ವಿಶಾಲಿನಿಯ ಮರಳಾಗಲ್ । ನಿಂತವಳಂತ್ಯಕ್ರಿಯೆ ಭೂ । ಕಾಂತಾತ್ಮಜ ತಕ್ಕ ರೀತಿಯಿಂದೆಸಗಿಸಿದಂ ॥ ೧ ॥

|| ರಾಗ ಮಧ್ಯಮಾವತಿ ತ್ರಿವುಡೆ ತಾಳ ||

ಅತ್ತಲಾ ನೃಪತುಂಗ ಭೂಪನು । ವಾರ್ತೆಯೆಲ್ಲವ ನರಿತು ತನ್ನಯ । ಪುತ್ರ ಶಂಕರಗಣನ ಸೇನಾ । ಮೊತ್ತ ಸಹಿತಲಿ ಕಿರಣ ಪುರದೀ । ನಿತ್ಯನಲ್ಲಾ ॥ ೧ ॥ ಮುತ್ತಿರಾಜ್ಯವ ಗೆಲಿದು ಪೀಠವ । ಹತ್ತು ವಾಸೆಯೆ ಹರಹರಾನಾ । ಹೊತ್ತು ಸಾಕಿದ ಮುದ್ದು ಕುವರಗೆ । ಧೂರ್ತತನ ವಿಂತಾಯ್ತೆ ವಿಷಯಿವಿ । ಚಿತ್ರವೈಸೇ ॥ ೨ ॥ ಪುತ್ರ ಮೋಹದಿ ಸುಮ್ಮನಿರೆಸ । ವರ್ತ್ರ ಜೈಸಿದ ಚಕ್ರವರ್ತಿಯ । ಕೀರ್ತಿಗೊಪ್ಪದು ಕ್ಷಾತ್ರ ಧರ್ಮದ । ವರ್ತನೆಯೆ ಪ್ರಾಮುಖ್ಯವೆಂದೆಣಿ । ಸುತ್ತಮನದೀ ॥ ೩ ॥ ಮಂತ್ರಿವರ್ಯರೆ ಕೇಳ್ದಿರೇ ಹಾ । ಸ್ವಂತ ಪುತ್ರನೆ ಗೈದ ದ್ರೋಹವ । ನೆಂತು ಸಹಿಸಲಿ ಚೈದ್ಯ ಹರಗಣ । ತಂತ್ರವೆಸಗಿದನವನಿಗಿನಿ ತೂ । ಬಂತೆ ಧೈರ್ಯ ॥ ೪ ॥ ಬಂಕರೇ ಮುಂತಾದ ಭಟನಾ । ಮಾಂಕಿತರುರಿಪುವಿಜಯಕೈದಿದ । ರಂಕೆಯೆಣಿಸಿಯೆ ಪುರವ ಮುತ್ತಲು । ಬಿಂಕದಿಂಸಿದ್ಧತೆಯ ಗೈದರು । ಶಂಕೆಯಿಲ್ಲಾ ॥ ೫ ॥ ಆದರೇನಾಯ್ತುಂಜುವುದೆನಾ । ವಾದುರಾತ್ಮರ ಸೊಕ್ಕನಡಗಿಸ । ಲೈದುವೆವು ವಿತಸೇನೆಯೊಂದಿಗೆ । ಕಾದುಕೊಂಡಿರಿ ನೀವೆ ಪುರವನು । ಕಾದಿಬಹೆವೂ ॥ ೬ ॥

|| ಭಾಮಿನಿ ||

ಎಂದೆನುತ ನೃಪತುಂಗ ಪೌರುಷ । ದಿಂದ ಪೊರಮಡುವನಿತಿತರೊಳು ನಡೆ । ತಂದಲೋಕಾದಿತ್ಯ ಪಡೆಸಹಪಡೆದು ಜಯು ಸಿರಿಯೂ । ಬಂದವನೆ



ಸಂದರ್ಭವರಿತು ನೃ । ಪೇಂದ್ರ ನಂಘ್ರಿಗೆ ಮಣಿದು ತಾವೇ । ಮುಂದುವರಿಯುವುದೇಕೆ ನಾನಿಹೆನೆನುತಲಿಂತೆಂದಾ ॥ ೧ ॥

|| ರಾಗ ಮಾರವಿ ಏಕತಾಳ ||

ಸ್ವಾಮಿ ಪರಾಕು ಪ್ರ । ಣಾಮವು ವೈರಿ । ಸ್ತೋಮವಸೋಲಿಸಿದೇ । ಆ ಮಾಂಡಲಿಕನು । ತಾ ಮಣಿದಿಪ್ಪನು । ಕ್ಷೇಮದೊಳೈತಂದೇ ॥ ೧ ॥ ಕಿರಣಪುರಕೆತಾವ್ । ತೆರಳುವ ದೇತಕೆ । ಕರುಣಿಸಿರಪ್ಪಣೆಯೂ । ಸರಿಯುತ ನಾಶಂ । ಕರಗಣಕೃಷ್ಣರ । ಧುರದಿಪಿಡಿವೆ ಸೆರೆಯೂ ॥ ೨ ॥ ತಂದವರನು ಪದ । ದ್ವಂದ್ವಕೆ ಕಾಣಿಕೆ । ಯೆಂದೊಪ್ಪಿಪೆ ಧಿಟವೂ । ಸಂದರ್ಭಕೆ ಸರಿ । ಹೊಂದಿಪೆಬಿಡಿ ತಾವ್ । ಮುಂದ್ವರಿವೀ ಹಟವೇ ॥ ೩ ॥

|| ರಾಗ ಸಾರಂಗ ಅಷ್ಟತಾಳ ||

ಭಳಿರೆ ಮೆಚ್ಚಿದೆ ಮುದ್ದು ಮಗನೇ । ನಮ್ಮ । ಬಲದೊಳು ನೀ ಸಹಸಿಗನೇ । ಗೆಲುವ ಮಿಹಿರ ಭೋಜ । ಗಳುಕದನೀ ರಾಜ । ಗಿಳಿದ ಪ್ರಾಯಕೆ । ಸಲುವಿಕಾರ್ಯಕೆ । ಗಳಿಸಿ ನಂಬಿಕೆ । ಯುಳುಹಿ ವಿಜಯಕೇ ॥ ೧ ॥ ಉತ್ತರ ಭಾಗದ ಜಯದಿ । ಉತ್ತ । ರೋತ್ತರ ಕೀರ್ತಿ ಸತ್ಕ್ರಿಯದೀ । ಚಿತ್ತಕ್ಕೇನೆಮ್ಮದಿ । ಯುತ್ಸಾಹ ಹಮ್ಮಿದಿ । ಮಿತ್ರಕೃಷ್ಣನ । ಶತ್ರುತನವಮನ । ವತ್ತಗೊಡದೆನ । ಗಿತ್ತನುಡಿದಿಘನ ॥ ೨ ॥ ಹೋಗಿ ಕಾರ್ಯದಿಜಯ ಪಡೆದೂ । ತಪ್ಪಿ । ಸಾಗದಂದದಿ ಸೆರೆ ಪಡಿದೂ । ಬಾಗಣೆಸದೆ ಸ್ನೇಹ । ಬಾಗದಿವ್ಯಾಮೋಹ । ತಾಗದೆಂಬುದ । ತೂಗಿ ನಂಬಿದ । ರಾಗ ಜಯ ಪ್ರದ । ನಾಗದಿರೆ ಸದ ॥ ೩ ॥

|| ಕಂದ ಪದ್ಯ ||

ಇಂತೆಂದಪ್ಪಣೆಯೀಯ । ಲ್ಕಂತವನರಿತು ವಿಜಯೋರ್ಕ ಮುಖ್ಯ ಸುಭ



Scanned by CamScanner

ಟರಂ । ತಾಂತಳುವದೆ ಕೂಡುತ್ತ ಮ ] ಹಾಂತ ಸಮರ್ಥಭುವನಾರ್ಕನ್ನೈದಿದ ನೊಡನಂ ॥ ೧ ॥

॥ ರಾಗ ಭೈರವಿ ಏಕತಾಳ ॥

ಕಿರಣ ಪುರವ ಮುತ್ತಲದಾ ] ಶಂ ] ಕರಗಣ ಪರಿಕಿಸುತರಿದಾ । ಬರೆ ಬಲ ಸಹ ಚಾಲುಕ್ಯಾ । ತಡೆ । ದರುಹಿದ ವಿಜಯೊದಿತ್ಯಾ ॥ ೧ ॥ ಭಲರೇ ಶಂಕರಗಣನೇ ] ರಣ ] ದಲಿನೀನೆನಗೇನ್ಗಣನೇ ] ಕಲಿಕನ್ನಡ ಸಾಮ್ರಾಟಾ । ದೊರೆ ] ಗಳಿಗಿದಿರೆದ್ದೆಯ ವಿಕಟಾ ॥ ೨ ॥ ವಿಕಟನೆನಲು ನೀನಾರೂ ] ನಿನ । ಗಕಟಾಯೆನ್ನಿಪೆನಿದಿರೂ । ಸುಖಿಸಲರಿಯೆ ನೀರಣದೀ ] ಜಯ ] ಪ್ರಕಟಿಪೆ ನಿದಿರಿಸೆಕ್ಷಣದೀ ॥ ೩ ॥ ಚೇದಿಯರಸನೀನೆಂಥಾ । ಕಲಿ । ಯೋಧನಿರುವಿಯೆಂಬಂಥಾ । ಬೋಧೆಯಿಹುದು ನಾನರಿವೇ । ನಿಲು । ಛೇದಿಪೆ ನಿನಗಬ್ಬರವೇ ॥ ೪ ॥ ಅಬ್ಬರಫಲ್ಲಯಥಾರ್ಥ ] ನೀ । ನುಬ್ಬುವುದೆಲ್ಲ ನಿರರ್ಥಾ । ಅರ್ಬುದ ಜಯ ನಿನ್ನಂತೇ । ರಣ । ಕುರ್ಬಲು ತರಿವೆನು ನಿಂತೇ ॥ ೫ ॥ ಆದರೆ ಬಹುಮಾತೇಕೇ । ನೀ । ಕಾದಲು ನಿಲು ನಿಲು ಜೋಕೇ । ಆಧರಿಸೆ ನ್ನಾತ ಖಡ್ಗಾ ] ತೆಗೆ । ದೇ ಧುಮುಕಲು ಮುಂದಾಗ ॥ ೬ ॥

॥ ಭಾಮಿನಿ ॥

ಆದುದಪರೊಳು ಸಮರ ಬಹುವಿಧ । ವಾದರಾಚಾಲುಕ್ಯ ನೃಪತಿಯ ] ಸಾಧನೆಯೆ ಮಿಗಿಲಾಗಿ ಕೊನೆಗಳಿದುರುಳಿದನುಚ್ಚೈದ್ಯಾ ] ಪೋದುದೀ ವಾರುತೆಯು ಕೃಷ್ಣಗೆ ] ಕ್ರೋಧಗೊಂಡವನಾಕ್ಷಣದಿ ಸಂ ] ಪಾದಿಸುವೆಜಯವೆಂದು ಬಂದಿದಿರಾಗುತಿಂತೆಂದಾ ॥ ೧ ॥

॥ ರಾಗ ಭೈರವಿ ಝಂಪೆ ತಾಳ ॥

ಭಳಿರೆವಿಜಯಾದಿತ್ಯ । ಬಲು ಹೆಚ್ಚೆ ಸಾಮರ್ಥ್ಯ ] ನಿಲುನೋಳ್ಪೆ ಕಾಣೆ



ಪೆಯ । ಕಲಹಕಂಜುವೆಯಾ ॥ ೧ ॥ ಅಂಜುವೆನೆ ನಿನಗಾನು ] ಭಂಜಿಸುವೆ ನಿಲೆ ನೀನು । ಭುಂಜಿಸುವಿಗ್ಗೈದುದನು । ಹಿಂಜರಿವಿಯೇನೂ ॥ ೨ ॥ ಅರ್ಥವಾಯಿತು ವಿಜಯ ] ಮಿತ್ರ ನಿನ್ನಯ ವಿಜಯ । ವ್ಯರ್ಥವೆನ್ನಿದಿರು ಭಯ । ಹೊತ್ತರೈದು ಪ್ರಿಯಾ ॥ ೩ ॥ ಅೈದುವೆನು ನಾ ನಿನ್ನ ] ನ್ಯೊದುಕೊಂಡೇ ನೃಪನ ] ಪಾದಕೊಪ್ಪಿಪುದೆನ್ನ ] ದೇ ಧರ್ಮ ಕಾರ್ಯಾ ॥ ೪ ॥ ಧರ್ಮ ಕಾರ್ಯವದೆಂದು ] ಹೆಮ್ಮೆಯಾಡುತ ನಿಂದು ] ಮರ್ಮಹತಿಯಲಿನೊಂದು ] ಕರ್ಮ ಪಡುಬೆಂದೂ ॥ ೫ ॥

॥ ಕಂದ ಪದ್ಯ ॥

ಆದರೆ ನಿಲ್ಲೆಂದಿದಿರಿಸಿ ] ಕಾದಲು ಬಲು ವಿಧ ಬಳಲಿಯೆ ಪಿಂದರಿಯಲ್ಕಂ ] ಕ್ರೋಧದಿ ಕಂಡಿದಿರಿಸಿಲೋ ] ಕಾದಿತ್ಯಂ ಸಾಹಸಾದಿ ಕೃತ್ಯಂ ತಡೆದಂ ॥ ೧ ॥

॥ ರಾಗ ಶಂಕರಾಭರಣ ಏಕತಾಳ ॥

ಭಲರೆ ಕೃಷ್ಣ ಬಾಲ್ಯಮಿತ್ರ ] ಬಳಸಿತಲ್ಲ ಬವರ ಸೂತ್ರ ] ಕಲಹಕೆಂದೆ ಬಂದೆ ತಂತ್ರ ] ಫಲಿಸದೆಂದಿಗೂ ॥ ೧ ॥ ಒಂದೆ ಗುರುವಿನಿಂದ ಕಲಿತು ] ಒಂದುಗೂಡಿ ಬೆಳೆದು ಬಲಿತು ] ಬಂದುಭಾವ ನೀನೇ ಮರೆತು ] ಬಂದೆ ಸಮರಕೇ ॥ ೨ ॥ ಅರಸರಾಜ್ಞೆಯಿಂದ । ಬಂದೇ । ಬರುವುದೇ ಕರ್ತವ್ಯವೆಂದೆ ] ಅರಿತು ನೀನೇಕಿದಿರು ನಿಂದೆ ] ಪೊರೆದ ತಂದೆಗೇ ॥ ೩ ॥ ತಂದೆಯೆನ್ನಧಿಕ್ಕರಿಸುತ ] ಅಂದು ನಿನ್ನ ಸ್ವೀಕರಿಸುತ ] ವಂದ್ಯದಳಪತಿತ್ವವಿತ್ತ ] ನೆಂದೆ ಪೊರಟೆನೂ ॥ ೪ ॥ ಅದಕೆ ನಿನಗೇಕಿಷ್ಟು ಕೋಪ । ಪದವಿಕೊಡುವ ಬಿಡುವ ಭೂಪ । ರಿದಿರು ನಮಗದೇಕೆ ತಾಪ । ವಿಧಿಗೆ ನಿಷ್ಠೆಯೂ ॥ ೫ ॥ ಅರಸರಾದರೇನು ಸ್ವೇಚ್ಛೆ । ಮೆರೆಸಬಹುದೆ ಪ್ರಜೆಗಳಿಚ್ಛೆ । ಯರಿಯದೇ ನಾನದಕೆ ಮೆಚ್ಚೆ । ಶರಣು ನ್ಯಾಯಕೇ ॥ ೬ ॥ ಸ್ವೇಚ್ಛೆಯಿದರೊಳೇನು ಬಂತು । ಮೆಚ್ಚಿ ಸಭಿಕರೆದ್ದು ನಿಂತು ] ನೆಚ್ಚಿಕೊಂಡುದರಿತೇಕಿಂತು ] ಕಿಚ್ಚು ಕಾರುವೀ ॥ ೭ ॥

॥ ರಾಗ ಭೈರವಿ ಏಕ ತಾಳ ॥

ಆದರದನು ಪಡೆಯುವರೇ । ನಾ । ಹಾದಿಯ ಹುಡುಕಿದೆ ನಿದಿರೆ । ಕಾದುತ ಸಾಮರ್ಥ್ಯದಲೀ । ಸಂ । ಪಾದಿಪೆ ತಡೆವವ ಬರಲೀ ॥ ೧ ॥ ಬರಲಿನ್ನೇನಿದೆ ಬಂದೇ । ಮುಂ । ದಿರುವೆನು ನಿನ್ನೆನ್ನಿಂದೇ । ಸೆರೆಪಿಡಿದೊಯ್ವೆನು ರಣದೀ । ಜಯ । ಸಿರಿ ಸಂಪಾದಿಸಿ ಕ್ಷಣದೀ ॥ ೨ ॥ ಭಳಿರೇ ಲೋಕಾದಿತ್ಯಾ । ನೀ । ಬಲವಿರೆ ಸಾಧಿಸುಕತ್ಯಾ । ನಿಲು ನಿಲು ನೋಡುವೆನೆಂದೂ । ತಾ । ಝುಳಪಿಸೆ ಖಡ್ಗವನಿಂದೂ ॥ ೩ ॥

॥ ವಾರ್ಧಿಕ್ಯ ॥

ಮಕ್ಕಳಾಲಿಸಿ ವೀರ ಯುವಕರಿಬ್ಬರ ಬವರ । ಒಕ್ಕಣಿಸಲೆಂತವರ ಪಟುಭಟತ್ವದ ವಿವರ ಸಿಕ್ಕದಂತಾಯ್ತು ಧುರ ಭುವಿಯದುರಲೊಂದು ಥರ ರಣ ಭಯಂಕರವಾಗಲೂ ॥ ತಕ್ಷಣವೆನೃಪ ಪುತ್ರ ಸೆರೆಸಿಕ್ಕೆ ಭುವಿ ಮಿತ್ರ ಮಿಕ್ಕಬಲ ಸರ್ವತ್ರಗೆಲಿದನೇನು ವಿಚಿತ್ರ । ದಕ್ಷನವತುಸು ಮಾತ್ರ ತಡೆಯದೊಳ್ಳೆಯ ಸೂತ್ರ । ದಿಂಕನಕ ಗಾತ್ರೆ ಸಹಿತಾ ॥ ೧ ॥

॥ ಕಂದ ಪದ್ಯ ॥

ಪೊರಟೈದುತ ನೃಪನೆಡೆಗಂ । ಚರಣಕೆ ಮಣಿದಾ ಕುಮಾರ ಮುಖ್ಯರ ನಿಲಿಸಲ್ । ಧರಣಿಪ ಸಹಿತಾ ಸಭೆಯೇ । ಬೆರಗಾಯ್ತಾತನ ಸುದಕ್ಷತೆಯ ಕಾರ್ಯಕ್ಕಂ ॥ ೧ ॥

॥ ಭಾಮಿನಿ ॥

ಆ ಸಮಯಕೈತಂದನಾ ಬಂ । ಕೇಶಗಂಗರ ಭಂಗಿಸುತ ಜಯ । ದೈಸಿ



ರಿಯ ಕೈಪಿಡಿದು ನೃಪನಡಿಗೆರಗೆ ಕಾಣುತ್ತಾ । ತೋಷದಿಂ ಮನ್ನಿಸುತ ಬಳಿಕವಿ । ಶೇಷ ವೈಭವದಿಂದ ಮೆರೆವಮ । ಹಾಸಭೆಯೊಳೆಲ್ಲವರು ನೆರೆದಿರಲೆಂದ ನೃಪತುಂಗಾ ॥ ೧ ॥

॥ ರಾಗ ಬೇಗಡೆ ಝಂಪೆ ತಾಳ ॥

ಗುರುವರರೆ, ಸಚಿವರೇ । ಧುರವಿಜಯ ಬಂಕರೇ । ಮುರಮಾಪ್ತ ಮಾಂಡಲಿಕ ನೃಪರೇ । ಮೆರೆವ ವಿದ್ವಜ್ಜನರೆ । ಸರುವ ಸಭಿಕರೆ ಸಖರೆ । ಅರಿಕೆಯನುದಯದಿ ಕೇಳುವಿರೇ ॥ ೧ ॥ ಪುತ್ರ ಕೃಷ್ಣನ ಮೋಹ । ಚಿತ್ತಕಿಲ್ಲವು ದ್ರೋಹ । ಹೊತ್ತನಿದಕಿಲ್ಲ ಸಂದೇಹಾ । ಮುತ್ತಿ ಪುರಕಾದಲಿಹ । ಕೃತ್ಯಯೆಣಿಸಲ್ಕಹ ಹ । ಕೃತ್ರಿಮತೆ ತುಂಬಿರುವ ದೇಹಾ ॥ ೨ ॥ ಆತನಪರಾಧಕ್ಕೇ । ಏತರದ ವಿಧಿ ಶಿಕ್ಷೆ । ಘಾತಗಿರೆಕ್ಷಮೆ ಬಿಕ್ಷೆ । ಮಾತಿಗೆಡೆಯಿಲ್ಲವು ನಿರೀಕ್ಷೆ ॥ ೩ ॥ ಆದರೂ ಪಿತಪುತರ । ದಾದ ನ್ಯಾಯಕ್ಕಿದರ । ವಾದನಮಗಿಲ್ಲ ಸುವಿಚಾರ । ಆಧಾರ ಧರ್ಮ ಪರ । ರಾದವರ ಸರಿ ವಿವರ । ಕಾದರಿಪೆ ನರುಹಿ ವಿಧಿಸಾರ ॥ ೪ ॥

॥ ಕಂದ ಪದ್ಯ ॥

ಒಮ್ಮತದಿಂದೊಪ್ಪುವ ವಿಧಿ । ಧರ್ಮವ ಪೇಳುವದೆನುತ್ತ ನುಡಿಯಲ್ಕಾಗಂ । ಸಮ್ಮತದಿಂದೆಲ್ಲರ ಪರ । ನಿರ್ಮಲ ಮತಿಗುರುವರ ಜಿನಸೇನಂ ಪೇಳ್ದಂ ॥ ೧ ॥

॥ ರಾಗ ಸೌರಾಷ್ಟ್ರ ಅಷ್ಟತಾಳ ॥

ರಾಜವಂಶಾಂಬುಧಿ । ರಾಜ ಸದ್ಗುಣ ನಿಧಿ । ಭೂಪಕೇಳೂ । ಕ್ಷಾತ್ರ । ತೇಜ ಸಾಹಸವೃದ್ಧಿ । ರಾಜತ ಪ್ರಭು ಸಿದ್ಧಿ । ಭೂಪ ಕೇಳೂ



Scanned by CamScanner

॥ ೧ ॥ ಸನ್ನುತ ಕರ್ನಾಟ । ಕುನ್ನತ ಸಾಮ್ರಾಟ । ಭೂಪ ಕೇಳೂ । ಈಗ । ನಿನ್ನ ನಿರ್ಣಯ ದಾಟ । ಲೆನ್ನಿಪ್ಪುದೇ ಕೂಟ । ಭೂಪಕೇಳೂ ॥ ೨ ॥ ನೀತಿ ಧರ್ಮದ ನ್ಯಾಯ । ನೀತಿಳಿದಿಹ ರಾಯ । ಭೂಪಕೇಳೂ । ಸರ್ವ । ಖಾತ್ರಿ ನಿಶ್ಚಯ । ಮಾತೊಂದ ನುಡಿಯಯ್ಯ । ಭೂಪ ಕೇಳೂ ॥ ೩ ॥

॥ ಭಾಮಿನಿ ॥

ಪೃಥ್ವಿಪತಿಯದ ಕೇಳುತೆಂದನು । ಪುತ್ರನೆಂದಿವಗಿಲ್ಲ ರಕ್ಷೆಯು । ಸತ್ಯ ಮಾರ್ಗವ ಬಿಟ್ಟು ನಮ್ಮ ರಾಜಪೀಠವನೂ । ಹತ್ತುವಾಸೆಯೊಳಖಿಳ ಪ್ರಜೆಗಳ । ರಕ್ತ ಸುರಿಸಲ್ಕೇಳ ನಿದಪರಾ । ಧತ್ವ ಮಿಗಿಲದರಿಂದಲೀ ತಗೆ ಚಿತ್ರವಧೆ ವಿಧಿಯೂ ॥ ॥

॥ ರಾಗ ಸಾರಂಗ ಅಷ್ಟತಾಳ ॥

ಇಂತೆಂದು ವಿಧಿಸೆ ಕೇಳೀ । ಸಮಸ್ತರು । ಚಿಂತಿಸೆ ಭಯವತಾಳಿ । ಸಂತ್ಯ ಸದೇ ಮೌನ । ವಾಂತಿರೆ ತಕ್ಷಣ । ಕಾಂತೆ ಕನಕ ಗಾತ್ರೆ । ನಿಂತೆಂದಳ ಸುಮನೇತ್ರೆ ॥ ೧ ॥ ಅರಿಕೆಯೊಂದಿಹುದು ಸ್ವಾಮಿ । ಮಹಾಪ್ರಭೋ । ಅರಸಿನಾನಿವರ ಪ್ರೇಮಿ । ಪರಿಣಯವಿಧಿಯಿಂದ । ವರಿಸಿಹೆನದರಿಂದ । ಕರುಣಿಸಿ ಪತಿ ಭಿಕ್ಷೆ । ಬರಲೆನಗೀ ಶಿಕ್ಷೆ ॥ ೨ ॥ ತರಳೆ ನಿ ಕ್ಷಮಿಸು ತಾಯೇ । ಅಪರಾಧಿಗೆ । ಸರಿಯಾದುದೀ ಶಿಕ್ಷೆಯೇ । ಕರುಣೆಗಾಸ್ಪದವಿಲ್ಲ । ಮರೆಸನಾಡಿದ ಸೊಲ್ಲ । ಬರಿದೆ ನಿನಗೆ ಸಲ್ಲ । ದರುಹಿಪ ಬಗೆಯುಲ್ಲ ॥ ೩ ॥

॥ ವಾರ್ಧಿಕ್ಯ ॥ ॥

ನಿತ್ರಾಗ ಬಿಂಕನೆಂದನು ಮಹಾಪ್ರಭುಗಳೇ । ಪುತ್ರ ನಂನಾಳುಹಬೇಕೆಂದಾನು ಬೇಡುವೆನು । ಚಿತ್ರಕದು ಸಮ್ಮತಿಸದಿರೆದಂಡನೆಯ ನಾಂ ಸ್ವೀಕರಿಪೆ



ನೆನೆ ಗುರುವರಾ । ಪೃಥ್ವಿಪಂ ಗೊರೆದನಹುದಹುದೆಲ್ಲವರು ಕೃಷ್ಣ । ಗಿತ್ತಪುದು ಕ್ಷಮೆಯ ಭಿಕ್ಷೆಯನೆಂದು ಪ್ರಾರ್ಥಿಪುದು । ಸತ್ಯ ಎಂತಿರೆದಂಡನೆಯುಃ ಸಲ್ಲದೆನೆ ಸಭಿಕರೆಲ್ಲರೂ ಸರಿಯೆಂದರೂ ॥ ೧ ॥

॥ ಭಾಮಿನಿ ॥

ಕುಂಭಿನೀಶನು ಕೇಳುತೆಲ್ಲವ । ತುಂಬಿದೀ ಸಭೆಯೊಮ್ಮ ತಕೆನಾ । ಬೆಂಬಲಿಸಬೇಕದುವೆ ಧರ್ಮವೆನುತ್ತ ಸಮ್ಮತಿಸೇ । ಸಂಭ್ರಮದಿ ಜಯ ಘೋಷದಿಂ ನೃಪ । ಸಂಭವನ ಸತಿ ಸಹಿತ ಬಂಧನ । ದಿಂಬಿಡಿಸಿ ಬಿಗಿಯಪ್ಪೆ ಸಂತಸವಾಯ್ತು ಸರ್ವರಿಗೂ ॥ ೧ ॥

॥ ರಾಗ ಕಾಂಬೋಧಿ ಝಂಪೆ ತಾಳ ॥

ಇಂತು ಕೆಲಗಾಲ ಸುಖ । ಸಂತಸದೊಳಿರೆಮಸಕ । ದಂತಯಶವಾಂತ ಕವಿ ಮಾರ್ಗ । ಘುಂತಾದ ಬಹು ಪ್ರಮುಖ । ಗ್ರಂಥಗಳ ನೃಪತಿಲಕ । ಸ್ವಂತ ರಚಿಸಿಯೆ ತೋರ್ದ ಮಾರ್ಗ ॥ ೧ ॥ ಕಲಿಯಿರ್ದು ಕವಿಯಾದ । ಕಳೆಯೇರ್ದ ಕನ್ನಡದ । ನೆಲದ ಹೆಸರಖಿಳ ಭಾರತದೀ । ನೆಲೆಯಾಗಿ ಸ್ಥಿರವಾದ । ಬೆಲೆ ಬೆಳಗಿತೆಲ್ಲವದ । ಮರೆಯ ದಂತಧಿಕ ಸಂಪದದೀ ॥ ೨ ॥ ಕರ್ನಾಟ ಸಾಮ್ರಾಟ । ನುನ್ನತದ ಮಣಿಮುಕುಟ । ಮನ್ನಣೆಯ ಪಡೆಯಿತೆಲ್ಲೆಲ್ಲೂ । ಮಾನ್ಯಖೇಟಕೆ ಕಾಟ । ವಿನ್ನಿಲ್ಲ ನೃಪಕೂಟ । ತಣ್ಣಗಾಯ್ತಿಲ್ಲಿದಿರು ಸೊಲ್ಲೂ ॥ ೩ ॥ ಅತ್ತಲಾಗಂಗನೃಪ । ಗಿತ್ತಣಾ ಸುಕಲಾಪ । ಮತ್ಸರಕ್ಕೆಡೆಯಾಗಿರೇಗೀ । ಹೊತ್ತು ಹೊತ್ತಿಗು ಕೋಪ । ಮತ್ತೇರಲಾತಾಪ । ತತ್ತರಿಸೆಸಹಿಸದವನಾಗೀ ॥ ೪ ॥ ಒಂದು ದಿನ ಓಲಗಕೆ । ಬಂದವನು ಸಂಗರಕೆ । ಮುಂದಾಗಿ ನೃಪತುಂಗ ನೃಪನಾ । ಕೊಂದೆ ಬರಬೇಕಿದಕೆ । ಹಿಂದುಳಿದು ನಿಲಲೇಕೆ । ಯೆಂದೀಕ್ಷಿಸಿದ ವೀರಸುತನಾ ॥ ೫ ॥



Scanned by CamScanner

## ॥ ರಾಗ ಮೂರವಿ ಏಕತಾಳ ॥

ತಾತನವರೆ ಬಿಡಿ । ರೇತಕೆ ಹಿಂದಡಿ । ಘಾತಿಸಬೇಕವನಾ । ಆತನದೇ
ನ್ನಡಿ । ಖಾತರಿಗಾನುಡಿ । ರೀತಿಯ ಮುರಿವೆನುನಾ ॥ ೧ ॥ ಹಿಂದಿನದೇನ್ಫಲ ।
ವಿಂದಾಕಲಕಲ । ಪೊಂದೂ ಸಲದೆಲ್ಲೂ । ಮುಂದಾಗುವ ಬಲ । ವೃಂದ
ಸಹಿತ ಛಲ । ಪೊಂದಿರೆ ಖಚಿತಗೆಲೂ ॥ ೨ ॥

## ॥ ವಾರ್ಧಿಕ್ಯ ॥

ಮುಂಗಥೆಯನಾಲಿಸಿರಿ ಮಕ್ಕಳಿರ ಕೇಳ್ದಿದಂ । ಗಂಗೇಶನುಬ್ಬುತಂ
ಸುತ ಸಹಿತ ನೆರಹಿ ಚತು । ,ರಂಗ ಬಲಮಂ ಸಾರ್ದನಾ ಮಾನ್ಯಖೇಟಪುರ
ದೊತ್ತಿಗತ್ಯುತ್ಸಾಹದೀ । ಸಂಗರಕೆ ಮುತ್ತಿ ಬಹಿರಂಗಗೊಳಿಸಲು ಪುರದ ।
ಸಂಗತಿಯೆ ಮುನ್ನ ತಿಳಕೊಂಬ ಬಗೆಗಾಗಿ ಭೂ । ತುಂಗನಂ ಗುಟ್ಟಿನೊಳ್ಕಳು
ಸಹಿಸುತ ತುಸು ದೂರ ಕಾದಿರ್ದ ಸೈನ್ಯ ಸಹಿತಾ ॥ ೧ ॥

## ॥ ರಾಗ ಸಾವೇರಿ ಅಷ್ಟತಾಳ ॥

ಆನಿತರೊಳ್ಚಂದ್ರಲೆ । ಯೆನಿಪ ಸುಕೋಮಲೆ । ವನಸಿರಿ ಯೀಕ್ಷಿಸ
ಲೆಂದೆನುತಾ । ವನಿತಾ ಮಣಿಗಳ । ನೆಣಿಸೇರಿಸಿಗೆಲ । ವಿನ ನಗೆಸೂಸುತ ಬರ
ಬರುತಾ ॥ ೧ ॥ ತರತರಸುಮಗಳ । ಪರಿಮಳ ಫಲಗಳ । ಮರಗಳ ಬಗೆ
ಬಗೆ ಪಕ್ಷಿಗಳಾ । ಸ್ವರಗಳ ಸೊಗಗಳ । ತರುಗಿದ ಲತೆಗಳ । ಮೆರೆಯುವ
ಹಸುರೆಲೆ ಹಸನಗಳಾ ॥ ೨ ॥ ಪರಿಕಿಸಿ ಪಲ ಬಗೆ । ಸರಸದಿ ಕಿರುನಗೆ । ಸಿರಿ
ಮೊಗ ಬೆಳಗಲು ಸಖಿಯರಿಗೇ । ಅರಿತಂದವಮಿಗೆ । ಯರುಹುತಲೊಂದಿಗೆ ।
ಬರೆ ಬರೆ ಮನಸಿಗೆ ಮುದವಾಗೇ ॥ ೩ ॥

## ॥ ಭಾಮಿನಿ ॥

ಹಾರೆ ಪಕ್ಷಿಗಳತ್ತಲಿತ್ತಲು । ಬೇರೆ ಕಪಿ ಮೃಗ ಬೆದರ ಹತ್ತಲು ।



ತೋರೆ ಸಿಡಿಲುಗ್ಗಡಿಸಿದಂದದಿ ಭೀಕರಾರ್ಭಟೆಯೂ । ನೀರೆಯರು ನಡ ನಡುಗೆ
ತನುಬಾ । ಯೂರೆ ಕಂದರು ಮುಂದೆಕೈತಹ । ಕೋರೆದಾಡೆಯ ಉಗ್ರಮೋ
ರೆಯ ಘೋರ ವ್ಯಾಘ್ರವನೂ ॥ ೧ ॥

## ॥ ಕಂದ ಪದ್ಯ ॥

ಮುಂದೇನ್ಗೈಯಲಿ ಹಾಹಾ । ಯೆಂದಬಲೆಯರಳುಕಲಾಕ್ಷಣದೆ
ಭೂತುಂಗಂ । ಬಂದು ಕಠಾರಿಲಿ ಹುಲಿಯಂ । ಕೊಂದಿಕ್ಕುತಲಿದಿರು ಚಂದ್ರ
ಲೆಯ ಕಂಡೆಂಪಂ ॥ ೧ ॥

## ॥ ರಾಗ ಬೇಗಡೆ ಏಕ ತಾಳ ॥

ಯಾರೆ ನೀರೆ ಪೈ । ಯೂರೆ ಭಯ ಪಡದೇ । ನೋಡದೋ ಕಂ ।
ಠ್ಣಾರೆ ನೆತ್ತರ । ಧಾರೆ ಹುಲಿಯದದೇ । ಕೋರೆದಾಡೆಯ । ಮೋರೆಯೆನ್ನ
ಯ । ಸೂರೆ ಕತ್ತಿಯ । ಗೀರೆಯಿೂಜಯ । ವೇರೆ ಹಾದಿಯ । ಸಾರೆ ಸಂ
ಶಯ । ಹಾರೆ ಸತ್ಕ್ರಿಯ । ತೋರೆನೇನ್ನಯ ॥ ೧ ॥ ಪುಣ್ಯವತಿ ನೀ । ನಿರ್ಣ
ಯವೆ ನಿನ್ನಾ । ಪೆಸರೇನು ಪೆತ್ತಿಹ । ಮನ್ನೆಯೂರ್ಸಂ । ಪನ್ನನಿಹಪಿತನಾ ।
ಧನ್ಯನಾಮುವ । ನನ್ನಲ್ಕೇಳುವ । ಕಣ್ಣಿಂ ಕಾಣುವ । ಸ್ವರ್ಣ ಸಮುಯುವ ।
ದನ್ನೆ ನೀಡುವ । ರಿನ್ನೂ ತವಕವ । ಮನ್ನಿಪಯ ನವ । ಕನ್ನೆಯನುಭವ ॥ ೨ ॥
ಸೃಷ್ಟಿಕರ್ತನು । ಸೃಷ್ಟಿಯನು ಬೆಳಗೇ । ಬೇಕೆಂದೆ ನಿಸ್ಸನು । ಸೃಷ್ಟಿಸಿಯೆತಾ ।
ಬಿಟ್ಟನೀ ಬಳಿಗೇ । ಬಟ್ಟೆಯಲೆಕಳೆ । ಗೊಟ್ಟೆಮನಕೆಲೆ । ಬಟ್ಟಬಲ್ಮೊಲೆ ।
ಗಟ್ಟಿಂದೆಸೆವಳೆ । ಶ್ರೇಷ್ಠತೆಗೆ ಬೆಲೆ । ಗಟ್ಟಿ ಭಲೆ ಭಲೆ । ಸ್ಪಷ್ಟ ಹೇಳಲೆ ।
ಒಟ್ಟೂ ನಿರ್ಮಲೆ ॥ ೩ ॥

## ॥ ರಾಗ ಮೋಹನ ಏಕ ತಾಸ ॥

ಧನ್ಯವಾದವು ಪ್ರಾಣ । ವನ್ನೆಕಾಯ್ದ ಪ್ರವೀಣ । ಪುಣ್ಯಾತ್ಮ ನಿಮ್ಮ



Scanned by CamScanner

ಗುಣ । ಹೊನ್ನಿಗೆ ಸಮಾನಾ ॥ ೧ ॥ ಪರಿಚಯುವ ಕೇಳುವರೆ । ಹರುಷವಿದೇ ಹೇಳುವಿರೆ । ಸರಿಸಮಯಕೊದಗದಿರೆ । ಪರಿಣಾಮಾ ಬೇರೆ ॥ ೨ ॥ ಅರಸ ನೃಪತುಂಗರಿಗೆ । ಆರಸಿಲಕ್ಷ್ಮೀ ಸತಿಗೆ । ತರಳೆಯಿಹ ಚಂದ್ರಲೆಗೆ । ಬರಲಾಯ್ತು ಹೀಗೇ ॥ ೩ ॥ ಪಟ್ಟಣದ ಹೊರಗಿರುವ । ದಟ್ಟವನಸಿರಿಯಿರವ । ದಿಟ್ಟಿಸಲು । ಬಂದರಿವ । ಪಟ್ಟೆ ನಿಂತಿರುವಾ ॥ ೪ ॥

॥ ರಾಗ ಕೇದಾರ ಗೌಳ ಅಷ್ಟತಾಳ ॥

ಬಾಲೆ ಕೇಳೆಲೆ ಶಶಿ । ಫಾಲೆ ನಾ ಗಂಗೇಶ । ಬಾಲಭೂತುಂಗ ನಿಹೇ । ಕೇಳಿ ಬಲ್ಲೆಯೊ ಯೇನೊ । ಮೇಲದ ತಲವನ । ದೇಳಿಗೆ ಗರ್ಹನಹೇ ॥ ೧ ॥ ಸರಿಯರಿತೆನುಕುಲ । ಬಿರಿದನುಳಿಪ ಬಲ । ಪರಿಚಯುವಾಯಿತಲ್ಲಾ । ಬರವೇತಕೋಯಿತ್ತ । ಲರುಹಬಹುದೊ ಚಿತ್ತ । ಪಿರೆ ಪೇಳೆ ಕೇಳ್ವೆನೆಲ್ಲಾ ॥ ೨ ॥ ಬಂದುದೇನೋ ಹೀಗೆ । ಸಂದರ್ಭ ಬಹ ಹಾಗೆ । ಹೊಂದಿತೆಲ್ಲ ಯೋಗವೂ । ಸುಂದರಿ ನಾನಿನ್ನ । ನೊಂದು ಕೇಳಲೆ ಚಿನ್ನ । ಒಂದಾಗ ಬೇಕು ನಾವೂ ॥ ೩ ॥ ತಪ್ಪಲ್ಲ ಮಾತಾದ । ರಪ್ಪನವರೆ ಮೊದ । ಲಪ್ಪಣೆ ಕೊಡದೆ ನಾನೂ । ಒಪ್ಪುವ ಹೊಣೆ ಪಡೆ । ದಿಪ್ಪವಳಲ್ಲಾಡೆ । ಬಪ್ಪುದೆ ಮಾಡಲೇನೂ ॥ ೪ ॥ ನ್ಯಾಯುವೆ ನಿನ್ನಯ । ಧ್ಯೇಯುಪಾದರು ಪ್ರಾಯ । ವಾಯಿತಲ್ಲವೆ ಯಿಚ್ಚೆಯೂ । ನೀಯರುಹಲು ಕಾರ್ಯ । ಕಾಯುವೆ ಸೌಕರ್ಯ । ಬಾಯಿ ಬಿಟ್ಟನ್ನುವೆಯೂ ॥ ೫ ॥ ಸ್ತ್ರೀಯರಂತರ್ಯವ । ಬಾಯಿಯಿಂದರಿಯುವ ॥ ದೇ । ಯುವಕರ ಕಾರ್ಯವೇ । ಆಯಿತೆಷ್ಟೋ ಹೊತ್ತು । ಕಾಯಲೇತಕೆ ನಿತ್ತು । ಹೋಯಿತೆಮನ ಧೈರ್ಯವೂ ॥ ೬ ॥

॥ ಭಾಮಿನಿ ॥

ಬುದ್ಧಿವಂತೆ ಕುಲೀನೆ ಚಂದ್ರಲೆ । ಶುದ್ಧ ಪುತ್ಥಳಿ ಚಿನ್ನವೆಂಬುದ । ನಿದ್ದಕಿದ್ದಂತರಿವುಗೊಳಿಸಿಯೆ ಸೂಕ್ಷ್ಮಮತಿಗಳಿಗೇ । ಎದ್ದು ಸಖಿಯರು ಸಹಿತ



ತನ್ನಪ್ರ । ಸಿದ್ಧ ಗೃಹದೆಡೆಗಾಗಿಗಮಿಸಲು । ಸದ್ದಡಗಿ ಮರೆಯಾಗೆ ಸರಿದನ ಗ್ರಹಿಸಿ ಭೂತುಂಗಾ ॥ ೧ ॥

॥ ಕಂದ ಪದ್ಯ ॥

ಮತ್ತಾಗಂಗಂ ಪುರವಂ । ಮುತ್ತಲ್ಕಾಣುತ ಕವಾಟ ರಕ್ಷಕ ಭಯದಿಂ । ತತ್ತರಿಸುತಲೋಡುತ್ತಂ । ಪೃಥ್ವಿಪನೋಲಗಕೆ ಸಾರ್ದು ಮಣಿದಿಂತೆಂದಂ

॥ ರಾಗ ಮುಖಾರಿ ಏಕತಾಳ ॥

ಬಂತೋ ಬಂತಯ್ಯ ದಂಡೂ । ಆರ್ಭಟಿಸಿಕೊಂಡು । ಬಂತೋ ಬಂತಯ್ಯ ದಂಡೂ । ಬಂತೋ । ಬಂತದ । ನಿಂತೇ ನೋಡಿದ । ದೆಂಥಾದ್ದೆಂಬುದ । ದಂಥಾದ್ದೈ ಮದ । ಪಾಂತರ ತಡೆದಾ । ರಂತೂ ಬಂದುದ । ಪಂಥದೊಳಾಡಿದ ನಂತ್ಯೈತಂದೆನು ॥ ೧ ॥ ಗಂಗರಂತವರು ದಾಂಡಿಗರೂ । ಗಂಭೀರವಾಗಿಹರೂ । ಸಂಗರಕಾರ್ಬಹರೆನ್ನುವರೂ । ಗಂಗಾಧರ ಬರೆ । ಕಂಗೆಡೆವೆಂಬರೆ । ಹಿಂಗರವರು ಬರೇ । ಭಂಗಿಯ ಕಂಡರೆ । ನುಂಗುವ ಹಾಗಿರೆ । ಅಂಗವರಿತೆನರೆ । ಸಂಗತಿ ಪೊಸತಿರೆ । ಹೀಂಗೈದಿದೆ ದೊರೆ ॥ ಬಂತೋ ॥ ೨ ॥

॥ ಭಾಮಿನಿ ॥

ಚರನನುಡಿಯನು ಕೇಳ್ದು ಭೂವರ । ನರರೆ ಗಂಗರಿಗಿನಿತು ಬಲುಹೇ । ತೆರಳಬೇಕೀಕ್ಷಣದಿರಣಕೆಂದೆನುತಲೆಡ ಬಲವಾ । ಪರಿಕಿಸಲು ಬಂಕೇಶ ಖಡ್ಗವ । ತಿರುಹು ತೊರೆಯೊಳಗಿಟ್ಟು ನೃಪನಿಂ । ಗೆರಗಿ ಕೈ ಮುಗಿದೆಂದನುರುತರ ಪಂಥ ಪೌರುಷದೀ ॥ ೧ ॥

॥ ರಾಗ ಭೈರವಿ ಅಷ್ಟತಾಳ ॥

ಚಕ್ರವರ್ತಿಗಳಾಲಿಸೀ । ಬಂದರೆ ಗಂಗ । ರಕ್ರುಮ ಬಗೆಗೆಳಸೀ । ಈ



Scanned by CamScanner

ಕ್ರಮಿಸುತ ಕೊಲುವೇ ॥ ೧ ॥ ಅಪ್ಪಣೆ
ಕ್ರಿಮಿಗಳಿಗುಪ । ರಾಕ್ರಮವೇನಾ । ನಾಕ್ರಮಿಸುತ ಕೊಲುವೇ ॥ ೧ ॥ ಅಪ್ಪಣೆ
ಯಿತ್ತರೀಗ । ಪೋಗುವೆನೆನೆ । ದರ್ಪದೊಳೆದ್ದು ಜೇಗಾ । ಅಪ್ಪನೇಕೈದುವ ।
ದಿಪ್ಪನಾನವರನು । ಅಪ್ಪಳಿಸುತ । ಬಹೆನೂ ॥ ೨ ॥ ರಣ ವೀಳ್ಯವೀವು
ದೆಂದೂ । ಲೋಕಾದಿತ್ಯ । ಮಣಿಯಲಿಂದಿರು ಬಂದೂ । ಎನಗಪ್ಪಣೆಯ
ಕೊಡ । ಲನುವರ ಕೈದುವೆ । ನೆನೆನಂದಿವರ್ಮನಾಗ ॥ ೩ ॥

॥ ರಾಗ ಭೈರವಿ ಏಕ ತಾಳ ॥

ವಿಜಯಾದಿತ್ಯನು ಮಣಿದೂ । ರಿಪು । ವ್ರಜವಂನಿದಿರಿಸಿ ಕುಣಿದೂ ।
ಗಜರಿನಿಲಲುನಾ ರಣವೀ । ಜಯ । ವಿಜಯಶ್ರೀಯನು ಕ್ಷಣದೀ ॥ ೧ ॥
ತಂದೊಪ್ಪಿಸುವೆನು ಪದಕೇ । ನಾ । ಹಿಂದುಳಿಯೆನು ಪೋಪುದಕೇ । ಸಂದೇಹಿ
ಸದಪ್ಪಣೆಯೂ । ಕೊಡಿ । ರೆಂದಿತ್ತನು ಭರವಸೆಯೂ ॥ ೨ ॥

॥ ಭಾಮಿನಿ ॥

ಕನ್ನಡಿಗರಭಿಮಾನ ದೇವತೆ । ಯನ್ನು ಪೂಜಿಸಿ ಪಡೆದು ಫಲಿಸಿದ ।
ಪುಣ್ಯದುದಯವೆ ವೀರಕ್ಷತ್ರಿಯರೂಪವಂನ್ನಾಂತೂ । ಬಣ್ಣಿಸಲಿಕೈತಂದ
ಬಗೆಯೋ । ಮಾನ್ಯಖೇಟಕ್ಕೊಲಿದು ಸುಬ್ರ । ಹ್ಮಣ್ಯ ಸ್ವಾಮಿಯೆ ಬಿಂಬಿ
ಸಿದ ಬಗೆ । ಎನ್ನಲೋ ಬೇರರಿಯೆನೆಂಬೋಲ್ ಕೃಷ್ಣಮಣಿದೆಂದಾ ॥ ೧ ॥

॥ ರಾಗ ಮಾರವಿ ಏಕ ತಾಳ ॥

ಜನಕನವರೆ ಬಿಡಿ । ರನುಮಾನವ ಕೊಡಿ । ರೆನಗಪ್ಪಣೆ ದಯದೀ
ರಣ ಪ್ರಜ್ಞೆಯ ನುಡಿ । ಯೆಣಿಸಿರಿ ಬಡಿ ಬಡಿ । ದನುವರದಲಿ ಜಯದೀ
॥ ೧ ॥ ಕನ್ನಡ ದೇಶದ । ಪುಣ್ಯ ವಿಶೇಷದ । ಮನ್ನಣೆ ಪಡೆಯುವೆನೂ
ಪನ್ನತಿಕೆಯಮದ । ಬಿನ್ನಣಕೈದಿದ । ಕುನ್ನಿಗಳನು ಬಿಡೆನೂ ॥ ೨ ॥ ಗಂಗಾ।



ದ್ಯರ ಸಮ । ರಾಂಗಣದಲ್ಲಿ ಯಮ । ನಿಂಗೀವೆನು ಧಿಟವೇ । ತುಂಗ ಪರಾ
ಕ್ರಮ । ರಂಗ ಸಮಕ್ಷಮ । ರಂಗೇರಿಪೆ ಹಟವೇ ॥ ೩ ॥

॥ ಭಾಮಿನಿ ॥

ಕೇಳುತೆಲ್ಲವನಾನೃಪಾಲವಿ । ಶಾಲಮತಿ ನೃಪತುಂಗ ನಿಂದಿನ । ಕಾಳ
ಗಕೆ ಮುಂದಾಳು ನಾನೇ ಬನ್ನಿ ನೀವ್‌ಜೊತೆಗೇ । ಖೂಳ ಗಂಗರ ಕುಲವನೇ
ನಿ । ನಿರ್ಮೂಲ ಮಾಳ್ಪುದೆ ಕಾರ್ಯ ಸಿದ್ಧತೆ । ಗೇಳಿರೆನಲಾಕ್ಷಣದಿ ಚಂದ್ರ
ಲೆ ಬಂದು ನಮಿಸಿದಳೂ ॥ ೧ ॥

॥ ರಾಗ ಕೇದಾರಗೌಳ ಝಂಪೆ ತಾಳ ॥

ಏನು ಮಗಳೇ ಚಂದ್ರಲೇ । ನೀ ಬಂದು । ದೇನು ಕಾರ್ಯದಲಿ ಪೇಳೇ ।
ಜಾಣೆ ನೀ ತಿಳಿವೆಯಲ್ಲಾ । ಯುದ್ಧಕಿಂ । ದಾನು ಪೊರಟಪ್ಪುದೆಲ್ಲಾ ॥ ೧ ॥
ಮಣಿವೆತಪ್ಪಾಯ್ತು ಕ್ಷಮಿಸೀ । ಅಭಯವ ವಿ । ತ್ತಣುಗಿಯನು । ಹರಸಿಗ
ಮಸೀ । ಜನಕ ತವ್ಮೊಡನೊಂದನೂ । ಪ್ರಾರ್ಥಿಸ । ಲೈನುತಲೋಡುತ
ಬಂದೆನೂ ॥ ೨ ॥ ಅಂಥದೇನೊದಗಿತೀಗಾ । ಭಯವ ಬಿ । ಟ್ಟಂತರ್ಯ
ಪೇಳು ಬೇಗಾ । ಎಂಥಹದ್ದಾದರದನೂ । ನಡೆಸಿಕೊಡು । ವಂಥವನು ಧಿಟ
ವೆನಾನೂ ॥ ೩ ॥ ನಿನ್ನ ನಾ ಸಖಿಯರೊಡನೇ । ತವ್ಮೊಡನೆ । ಎನ್ನದೇ
ಪೋದೆನೊಡನೇ । ಕಣ್ಣಾರೆ ವನಸಿರಿಯನೂ । ಕಾಂಬ ಬಗೆ । ಗೆನ್ನುತಲೆ ಪುರ
ಬಿಟ್ಟೆನೂ ॥ ೪ ॥ ಪೇಳದ್ಯೈದಿದೆಯೆನ್ನುತಾ । ನಾಕೋಪ । ತಾಳೆ ಬಿಡುಭಯ
ಬಯಸುತಾ । ಕಾಲಿಟ್ಟರೇನಾಯಿತೂ । ನಿನ್ನ ಗುಣ । ಶೀಲವನ್ನರಿವೆನನಿತೂ
॥ ೫ ॥ ಅಲ್ಲೊಂದು ಬವಣೆ ಬಂತೂ । ಘೋರ ಹುಲಿ । ಭುಲ್ಲವಿಸಿ ಬರಲಿ
ಕಂತೂ । ತಲ್ಲಣಿಸೆ ನಿಮಿಷಕಾಗಾ । ಭಟನೋರ್ವ ಕೊಲ್ಲುತದ ಕಾಯ್ದ ಬೇ
ಗಾ ॥ ೬ ॥ ಅರರೇ ಮಗಳೇಯೂರವಾ । ಕಾಯ್ದಾತ । ಆರುಹು ಬೇಗನೆ
ವಿವರವಾ । ಪರಮಾತ್ಮನೇ ಬರಿಸಿದಾ । ಆತನನು । ಹರಸುವೆನು ನಾ ಸರ್ವ
ದಾ ॥ ೭ ॥

|| ಭಾಮಿನಿ ||

ಸಂಗರಕ್ಕೆನುತೀಗ । ಬಂದಿಹ । ಗಂಗರಾಜರತನೆಯನಾ ಭೂ । ತುಂಗ ನೆಂಬವನವನೆ ನಮ್ಮಯ ಪ್ರಾಣ ರಕ್ಷಕನೂ ॥ ಅಂಗಜನ ಪ್ರತಿರೂಪನವನರ । ಣಾಂಗಣದಿ ಕೊಲ ಬೇಡಿರಪ್ಪಪ್ರ । ಸಂಗಕೊದಗಿದ ಪುಣ್ಯ ಪುರುಷನ ಕಾಯೆ ಪ್ರಾರ್ಥಿಪೆನೂ ॥ ೧ ॥

|| ವಾರ್ಧಿಕ್ಯ ||

ನಿನ್ನಂಥ ಪುತ್ರಿಯಂ ಪಡೆದುದೆಮ್ಮಯ ಪುಣ್ಯ । ಕನ್ನಡದ ಕಣ್ಮಣಿಯೆ ಕನ್ನಿಕಾಕುಲಕಣಿಯೆ । ಧನ್ಯೆ ಮಗಳೇ ನೀನು ಪ್ರಾಣ ರಕ್ಷಕನ ಬಗೆಗಿಹ ಕೃತಜ್ಞತೆ ನಡೆಯನೂ ॥ ಎಣ್ಣೆಸುತಲೆಣ್ಣೆಸುತಲಾನಂದವಾಯ್ತೊಳಗೆ । ಬಣ್ಣಿಸದೆ ಬಚ್ಚಿಟ್ಟುದರಿವಾಯ್ತು ಭೂತುಂಗ । ನನ್ನು ಕಾಯುವ ಹೊಣೆಯ ಹೊತ್ತೆ ನಿನ್ನಯ ಬಯಕೆ । ಯಂ ಪೂರ್ಣಗೊಳಿಪೆಬಹೆನೂ ॥ ೧ ॥

|| ಭಾಮಿನಿ ||

ಪುತ್ರಿಗಭಯವನಿತ್ತು ಬಳಿಕಾ । ಪೃಥ್ವಿ ಪಾಲಕ ಬಂಕ ಲೋಕಾ । ದಿತ ಮುಖ್ಯರಿಗೆಚ್ಚರಿಸುತದ ಸಾರ್ದರಣ ಕೊಡನೆ। ಮುತ್ತೆಗಂಗರ ಬಲವನೀಕ್ಷಿಸಿ। ನಿತ್ತಿದಿರು ಭೂತುಂಗ ತಡೆಯೆಮ। ಹತ್ತರದ ಖಡ್ಗವನು ಝುಳಪಿಸುತೆಂದ್ಯ ಕಾಂಚೀಶಾ ॥ ೧ ॥

|| ರಾಗ ಭೈರವಿ ಏಕತಾಳ ||

ಬಂದೆಯ ಭಲೆ ಭೂತುಂಗಾ । ನೀ । ಹಿಂದಿನ ರಣದಪ್ರಸಂಗಾ । ಒಂದೂಗ್ರಹಿಸದೆ ಮರುಳೇ । ಸುಖ । ಹಿಂದಕೆ ಬೇಗನೆ ಮರಳೇ ॥ ೧ ॥



ಮರಳಲು ಬಂದವನಲ್ಲಾ । ಈ । ಧುರದಲಿನಿಮ್ಮನ್ನೆಲ್ಲಾ । ತರಿದೇಪುರವಶಗೈವೇ । ಗತ । ಪರಿಭವಕಿದೆ ಫಲವಿವೇ ॥ ೨ ॥ ಆದರೆ ನಿಲ್ಲೆಂದೆನುತಾ । ಬಲು । ಕ್ರೋಧದಿ ಹ್ಯೊದಾಡುತ್ತಾ । ಸಾಧಿಸದಿರೆ ಹಿಂಜರಿದಾ । ವಿಜ। ಯಾದಿತ್ಯನೆಯಿದಿರಾದಾ ॥ ೩ ॥

|| ರಾಗ ಪಂತುರಾವಳಿ ಮಟ್ಟೆ ತಾಳ ||

ಭಲೆ ಭೂತುಂಗ । ಬಲುಮೆಯಂಗ । ಸಲದುಯೆನ್ನೊಳೂ । ನಿಲಲು ಭಂಗ । ಗೊಳುವಿತುಂಗ । ಬಲದಿಹಳಚಲೂ ॥ ೧ ॥ ವಿಜಯಾದಿತ್ಯ । ವಿಜಯ ಕೃತ್ಯ । ಸೃಜಿಸಲರಿವೆಯೂ । ಭುಜದ ಸಿರಿಯ । ಭುಜಪಲರಿಯ । ಗಜರೆ ನಿರ್ಭಯೂ ॥ ೨ ॥ ನಿಲು ನಿಲಾದ । ರಳಿವಯೋಧ । ನಳಲಕಾಂಬೆನೂ । ತಲೆಯ ಪಾದ । ಕಿಳಿಪೆ ಕಾದ ಲೆಳಸದುಳಿನೀನೂ ॥ ೩ ॥ ಎಂದಡಾಗ । ನಿಂದು ಬಾಗ । ದೆಂದು ಕಾದಲೂ । ನೊಂದು ಸಾಗ । ದೆಂದು ಬೇಗ । ಹಿಂದಕೈದಲೂ ॥ ೪ ॥

|| ರಾಗ ಭೈರವಿ ಅಷ್ಟತಾಳ ||

ವಿಜಯಾದಿತ್ಯನು ಸೋಲಲೂ । ಲೋಕಾದಿತ್ಯ । ಗಜರುತೆಂದನು ನಿಲಲೂ । ಭುಜಸತ್ವವಿರಲು ಬಾ । ಗಜರಾಜ ನಿದಿರೊಳು । ಅಜಕಾದಗತಿಯಪ್ಪುದೂ ॥ ೧ ॥ ಬಂಕೇಶನಣುಗ ಭಲೇ । ನಿನ್ನಯ ಸತ್ವ । ಬಿಂಕವ ಕೇಳಿಬಲ್ಲೇ । ಅಂಕುಶವಿತೆಕರಿ । ಯಂಕೆಗೆ ಬಹುದರಿ । ಶಂಕೆಯಿಲ್ಲದೆ ಗೆಲ್ಲುವೇ ॥ ೨ ॥ ಗೆದ್ದರೆ ಸಂತೋಷವೇ । ಆದರೆ ರಣ । ಸಿದ್ಧಿಯ ಪಡೆದಿರುವೇ । ಬಿದ್ದಳಿಯುವಿಯೇಕೆ । ಯುದ್ಧಕಿಳಿಯೆ ಜೋಕೆ । ಸುದ್ದಿ ಬಿಟ್ಟಿತ್ತ ಸಾರೂ ॥ ೩ ॥

|| ಭಾಮಿನಿ ||

ಸಾರುವವನಾನಲ್ಲ ಬಿಡು ಸಂ । ಹಾರ ಭೈರವ ನಾಟನೋಡೆಂ । ದೇರೆ



Scanned by CamScanner

ಕತ್ತಿಯನೆತ್ತಿ ಲೋಕಾದಿತ್ಯ ನಿದಿರಿಸಲೂ ॥ ಧಾರುಣಿಯೆ ನಡ ನಡುಗಿತಿಬ್ಬರು । ವೀರರಥಟಿಗೆ ಕಾಳಗದಗತಿ । ಗಾರು ಹೊಣೆ ಬಂಕೇಶನಂದನನಪ್ಪಿದನು ಸೋಲಾ ॥ ೧ ॥

॥ ಕಂದ ಪದ್ಯ ॥

ಕಾಣುತ್ತದ ಕಲಿಕೃಷ್ಣಂ । ಸ್ಥಾಣುವೆನಲು ಖತಿಯ ನಾಂತು ತಡೆಯು ತ್ರಾಗಂ । ತಾನೆಂತಹ ಸಹಸದ ಸು । ತ್ರಾಣಿಯದೆಂಬುದನು ತೋರ್ವೆನೆಂದಿಂತೆಂದಂ ॥ ೧ ॥

॥ ರಾಗ ಮಾರವಿ ಏಕತಾಳ ॥

ಭೂತುಂಗನೆ ಭೆಲೆ । ಖ್ಯಾತನೆನುವನೆಲೆ । ಗಾತುರಗೊಳುತಿಹೆಯಾ । ಆತರಕೀಗಲೆ । ನಾತೆರುವೆನು ಬೆಲೆ । ಘಾತಿಪೆ ಭಟನಹೆಯೊ ॥ ೧ ॥ ಅರಿತಿಹೆ ನಿನ್ನನು । ಧುರದೊಳಗೆನ್ನನು । ಸರಿ ಸರಿಯಿದಿರಿಸಲು । ಕರೆತಾ ಪಿತನನು । ಕರಕರೆಯೇಕನು । ವರಬಿಟ್ಟರೆ ಮೇಲೂ ॥ ೨ ॥ ಇಲ್ಲಿಗೇತಕೆ ಹುಲಿ । ಕಲಿತನಬಾಯಲಿ । ಗಳಹುವತೆರಸಲ್ಲಾ । ಬಲವಿರಲೆನ್ನಲಿ । ಬಳಸದ ನಿನ್ನಲಿ । ಉಳಿಯಗೊಡೆನು ಮಲ್ಲಾ ॥ ೩ ॥ ಹರಿಯಿದಿರೊಳು ಕುರಿ । ಮರಿ ನಿತ್ತರೆ ಸರಿ । ಬರುವುದೆ ಹೇ ಮರುಳೇ । ಪರಿಮೆಯುತಾ ಸರಿ । ದರೆ ಸಂಪಿಗೆ ಗುರಿ । ಗುರಿಯದುಳಿಗೆ ಮರಳೇ ॥ ೪ ॥ ಸಂಪಿಗೆ ಗಡ ಬಿಡೆ । ಕಂಪಿಗೆರವಿಯೆಡೆ । ಕಂಪಿಸುತಲೆ ಮುದುಡೇ । ಸೊಂಪಿಗೆ ಮತ್ತೆಡೆ । ಯಾಂಪುದೆಯದೆ ತಡೆ । ಗಾಂಪನೆಯಾಡಿದಡೇ ॥ ೫ ॥ ಹತ್ತಿದ ಪಿತ್ಥದ । ಮತ್ತದ ನುಡಿಯಿದ । ನೆತ್ತಲು ಮುಂದಿನ್ನೂ । ನಿತ್ತಿರ ಬಿಡೆನದ । ಕತ್ತಿಯನೆತ್ತಿದ । ಹೊತ್ತಿಗೆಯಿಳಿಸುವೆನೂ ॥ ೬ ॥ ಆದರೆ ನಿಲು ನಿಲು । ಸಾಧಿಸುವೆನು ಗೆಲು । ಕಾದಾಡೆಂದೆನುತಾ । ಕ್ರೋಧದಿ ಧುಮುಕಲು । ಆದುದು ರಣ ಬಲು । ಸಾಧನೆಯಾಕ್ರಮಿತಾ ॥ ೭ ॥



॥ ಭಾಮಿನಿ ॥

ಬಣ್ಣಿಸಲ್ಕರಿದೆನಲು ಕಾದಿದ । ರೆನ್ನ ಕೈ ಮೇಲೆನ್ನ ಕೈ ಮೇಲೆನ್ನುತಾ ರಣಾರಂಗಧೂಳಿಯು ಮುಸುಕಲಂಬರವಾ ॥ ಕನ್ನಡದ ಕಲಿ ವೀರಗಾರ್ಸರಿ । ಯೆನ್ನುವಂತಾಯ್ತೊಡನೆ ಕೃಷ್ಣ ಮ । ಹೋನ್ನತದ ಶಕ್ತಿಯಲಿ ಭೂತುಂಗನನು ಸೆರೆ ಪಿಡಿದಾ ॥ ೧ ॥

॥ ಕಂದ ಪದ್ಯ ॥

ಗಂಗೇಶಂ ಕಂಡದನುಂ । ಕಂಗಳೊಳ್ ಖಿಡಿಯುಗುಳುತ್ತಲಾಕ್ಷಣದೊಳಗಂ । ಹಿಂಗದೆ ಬಿಡಿಸಲೆನುತ್ತಂ । ಮುಂಗೊಳೆ ತಡೆದಾ ದಳೇಶಬಂಕಂ ಪೇಳ್ದಂ ॥ ೧ ॥

॥ ರಾಗ ಶಂಕರಾಭರಣ ಮಟ್ಟೆ ತಾಳ ॥

ಭಳಿರೆ ಗಂಗ ಹಿಂದೆ ಭಂಗ । ಗಳಿಸಿ ರಂಗ ತೊರೆದು ತಂಗ । ದುಳಿಯು ವಂಗಕೋಡಿ ಸಂಗ । ಕಳೆದುದರಿಯೆಯೂ ॥ ೧ ॥ ಬಂಕ ಬಂದೆ ತಿಳಿದೆ ಹಿಂದೆ । ಬಿಂಕದಿಂದೆಗೆಲಿದೆಯೆಂದೆ । ಶಂಖಿ ಹೊಂದೆ ಗೆಲುವೆ ನಿಂದೇ । ಮುಂಕೆ ಮರಳಿದೇ ॥ ೨ ॥ ಮಾನ್ಯಖೇಟ ದೊರೆಸಾಮ್ರಾಟ । ನಿನ್ನ ನೋಟವಿಲ್ಲಿ ನಾಟ । ಮಾನ್ಯ ಸುಭಟ ರಾಷ್ಟ್ರ ಕೂಟ । ರುನ್ನತರೆ ಧಿಟಾ ॥ ೩ ॥ ತಿಳಿವೆನೆಲ್ಲ ಗೆಲುವು ಸೋಲ । ಬಲದ ಕಾಲ ಶಕ್ತಿ ಮೂಲ । ಗಳಿಪೆ ಪ್ರಬಲ ಜಯಾಪನಾಳಲಿಳಿದೆ ನೀ ಸಲಾ ॥ ೪ ॥ ಕಾಲ ನೊಲಿವ ನಿನಗೆ ಸಾವ । ಕಾಲವೆನುವದರಿತು ನಿಲುವ । ದಾಳು ತನವ ಮೆರಸೆ ಗೆಲವ । ತಾಳೆಯನುಭವಾ ॥ ೫ ॥ ಅನುಭವೀಯೆ ನೀನನುಭವಿಯೆ । ಎಣಿಸದಿಳಿಯೆ ರಣದೊಳಳಿಯೆ । ನಿನಗೆಕಾಯೆಕರೆ ಸುಮೊರೆಯೆ । ಕುಣಿಯೆಯಿಡೆದಯೋ ॥ ೬ ॥ ಅಷ್ಟು ಧೈರ್ಯ ವಿರಲು ಶೌರ್ಯ । ಧಾಷ್ಟ್ರ್ಯತೆಯ ಕಾಣಿಸುವೆಯು । ಥಟ್ಟ ನಿಳಿಯಲೀಗ ತಲೆಯ । ಕುಟ್ಟಿತಹೆ ಜಯಾ ॥ ೭ ॥

|| ಭಾಮಿನಿ ||

ಖಡುಗವನು ಝಳಪಿಸುತಲೀರ್ವರು | ತೊಡಗೆ ಯುದ್ಧಕೇನನೆಂಬೆನು | ನಡುಗಿತಿಳೆ ಪದಹತಿಗೆ | ನೋಟಕರೆಲ್ಲ ಬೆರಗಾಗೇ | ಕಡೆಗೆ ಗಂಗಾಧಿಪನ ಸಹಸದ | ಹೊಡೆತಕಾ ಬಂಕೇಶ ಸೋಲಲು | ತಡೆದ ಖಿಡಿಗೆದರುತ್ತ ಸಮರೋತ್ತುಂಗ ನೃಪತುಂಗಾ || ೧ ||

|| ರಾಗ ಭೈರವಿ ಏಕ ತಾಳ ||

ಬಂದೆಯಾ ಭಲೆ ಭಲೆಗಂಗಾ | ನೀ | ಹಿಂದಕ್ಕಾದ ಪ್ರಸಂಗಾ | ಒಂದೂ ಗ್ರಹಿಸದೆ ತುಂಗಾ | ಬಲ | ನೆಂದರೆ ನಾ ನೃಪತುಂಗಾ || ೧ || ನೃಪತುಂಗನು ನೀನಹುದೂ | ಎನ | ಗಪ ರೂಪನೆ ನೀ ಬಹುದೂ | ನಿಪುಣ ಪರಾಕ್ರಮಿಯೆಂಬಾ | ಬಗೆ | ಸಫಲಿಸಬಿಡೆ ಬಿಡು ಜಂಭಾ || ೨ || ಜಂಭದ ಮಾತನ್ನಾಡೇ | ಹೇ | ಹುಂಬನೆ ಕನ್ನಡ ನಾಡೇ | ತುಂಬಿದ ಸುಭಟರ ಬೀಡೇ | ನಿನ | ಗಿಂಬಿದೆ ನಮ್ಮನು ಬೇಡೇ || ೩ || ಬೇಡೆನು ನಾಕಲಿ ಬಂಕಾ | ಹೋ | ರಾಡಿಯೆ ಸೋತನು ಬಿಂಕಾ | ಆಡಲು ವಿಜಯವು ಸೋಂಕಾ | ನೀ | ಸೋಡುವಿನಾ ನಿಶ್ಶಂಕಾ || ೪ || ಶಂಕಿಸದಷ್ಟೂ ಧೈರ್ಯ | ನಿನ | ಗಂ ಕುರಿಸಿತೆ ಹೊಸ ಶೌರ್ಯ | ಮಂಕುಮತಿಯೆ ಭುಜಸಿರಿಯೂ | ಎಂ | ನ್ನಂಕೆಯೊಳಿಟ್ಟೇ ಕಾರ್ಯ || ೫ || ಕಾರ್ಯವ ಸಾಧಿಸಲೆಂದೇ | ನಾ | ಶೌರ್ಯದಿ ಬಲಸಹ ಬಂದೇ | ಧೈರ್ಯ ವಿರಲು ಬಾ ಮುಂದೇ | ರಣ | ದಾರ್ಯತೆಯರಿಯು ವಿಯಿಂದೇ || ೬ || ದುಡುಕಿನ ಮಾತಾಡುವೆಯಾ | ನೀ | ಪಿಡಿ ಪಿಡಿ ಖಡ್ಗವ ದಡಿಯೂ | ಕಡಿವೆನು ನಿನ್ನಯ ತಲೆಯೂ ನಾ | ಬಿಡೆನೆಂದಿಗುರಣಕಲೆಯೂ || ೭ ||

|| ರಾಗ ಶಂಕರಾಭರಣ ಏಕ ತಾಳ ||

ಎಂದ ಮಾತ ಕೇಳಿ ಕೋಪ | ದಿಂದ ಗಂಗ ಬಹು ಪ್ರತಾಪ | ದಂಡಕಾಂಚೆ ಖಡ್ಗ ಹೊಳಪ | ದೊಂದೆ ಸಾಕಿ ದೋ || ೧ || ಸಹಿಸೆನುತ್ತಲೆರಗೆ ಗುರಿಯ



ಯ | ಮಹಿಪತಪ್ಪಿ ಸುತ್ತಲರಿಯ | ಲಿಹುದೆ ಸತ್ವ ನುಡಿದೆ ಪುಸಿಯ | ನಹಹ ನೋಡಿದೇ || ೨ || ಎನ್ನ ಚಪಲ ತನವ ನೋಡು | ಮುನ್ನ ಖಡ್ಗವೆತ್ತುತೀಡು | ಕಣ್ಣೆಗಿದಿರು ಕಾಂಬ ಪಾಡು | ಎನ್ನುತೆರಗಿದಾ || ೩ ||

|| ವಾರ್ಧಿಕ್ಯ ||

ಕನ್ನಡದ ಸಾಮ್ರಾಟನುನ್ನತದ ಹೋರಾಟ | ವನ್ನು ಸಹಿಸುವ ಸುಭಟರಿನ್ನಿಲ್ಲ ಹಾರಾಟ | ತಣ್ಣಗಾಯ್ತೂ ವಿಕಟ ಗಂಗೇಶನಕಟಕಟ ಹಾಯೆನುತ ಶರಣಾಗುತಾ | ಮನ್ನಿಸುವದೆನ್ನ ಹಟವಿನ್ನಿಲ್ಲ ವಿದುವೆ ಧಿಟ | ವೆನ್ನೇ ಪ್ರೀತಿಯ ನೋಟ ಮಾನ್ಯತೆಯ ಸಾಮ್ರಾಟ | ಗನ್ನಿಸಿತು ಗುಣಕೂಟ ಗಣ್ಯನಲೆ ಧುರದಾಟವಂ ನಿಲ್ಲಿಸಿದನಾಕ್ಷಣಾ || ೧ |

|| ರಾಗ ಮಧ್ಯಮಾವತಿ ತ್ರಿವುಡೆ ತಾಳ ||

ಮಕ್ಕಳಿರ ನೀಪ್ಕೇಳಿ ಸಂತಸ | ವುಕ್ಕಲಾ ನೃಪತುಂಗ ಗಂಗನ | ತಕ್ಕವಿಸಿ ಭೂತುಂಗನನು ಸೆರೆ | ಸಿಕ್ಕಿದನ ಕರೆತರಿಸುತಾ | ತಕ್ಷಣದಲೀ || ೧ || ಪ್ರೀತಿಯಿಂ ಮನ್ನಿಸುತ ಹುಲಿಯನು | ಘಾತಿಸುತ ಕಾಯ್ದಿರುವಿ ಮಾಮಂ | ಜಾತೆ ಚಂದ್ರಲೆಯನ್ನು ನೀ ಜಾ | ಮಾತನಪ್ಪುದು ವರಿಸುತಾ | ರೀತಿಯಿಂದಾ || ೨ || ಎಂದು ಗಂಗೇಶ್ವರನ ನೋಡಲು | ಚಂದವಾಯ್ತೆನುತೊಪ್ಪೆ ಬಳಿಕಾ | ನಂದದಿಂದೆಲ್ಲವರ ಪುರಕೊಲ | ವಿಂದ ಕರಕೊಂಡೈದುತಾ | ನಂದನೆಯನೂ || ೩ || ಶುಭಮುಹೂರ್ತದಿ ಪರಿಣಯುವ ಘನ | ವಿಭವದಿಂ ಪೂರೈಸಿ ಮನ್ನಿಸಿ | ಇಭತುರಂಗ ಸುರತ್ನ ಮುಂತಾ | ದುಭಯ ಕುಲ ಮೆಚ್ಚುಗೆಗೇ | ಸೊಬಗ ನೀವಾ || ೪ || ಬಳವಳಿಯ ನಿತ್ತಳಿಯ ಮಕ್ಕಳ | ಕಳುಹಿ ಬಂಧುಗಳೊಡನೆ ಬಳಿಕಾ | ಇಳೆಯಧಿಪನೃಪತುಂಗಸುತ ಸಹ | ಬಲು ಸುಖದೊಳರಸಾಗಿಯೋ | ಬೆಳಗುತಿರ್ದಾ || ೫ || ಎಂದು ಕೀರಿಕ್ಕಾಡು ಬೋಧಕ | ನಿಂದಿರೇಶನ ಭಕ್ತ ವಿಷ್ಣುವು | ಕಂದ ರಿಂಗೀ ಯಕ್ಷಗಾನ ಪ್ರ | ಬಂಧವನು ವಿಸ್ತರಿಸಿದಾ | ಚಂದದಿಂದಾ || ೬ || ಮುನಿಪುರದ ಗೋಪಾಲಕೃಷ್ಣನು | ಮನಕೆ ಬರಿ



Scanned by CamScanner

ಸಿದ ತೆರದೊಳಿದರನು । ಜನರ ಮುಂದಿರಿಸಿಹನು ವಿನಯದಿ । ಮಣಿದು

ಹರಿಗೇ ॥ ೭ ॥

। ಮಂಗಲಂ ಪದ ।

॥ ರಾಗ ಮೋಹನ ಏಕ ತಾಳ ॥

ಮಂಗಲ ಶ್ರೀ ವೈಕುಂಠ ನಿವಾಸಗೆ । ಮಂಗಲಂ ಮಧುಸೂದನನಿಗೇ । ಮಂಗಲಂ ಮಂಗಲ ರೂಪ ವಿಲಾಸಗೆ । ಮಂಗಲಂ ಮಾಧವ ದೇವನಿಗೇ ॥ ಮಂಗಲಂ ॥ ೧ ॥ ಮಂಗಲಂ ಹತ್ತವತಾರವ ಗೈದಗೆ । ಮಂಗಲಂ ಮಾರನ ಪಡೆದವಗೇ । ಮಂಗಲಂ ಸರ್ವ ಲೋಕೇಶ ಮುಕುಂದಗೆ । ಮಂಗಲಂ ನಿತ್ಯಾನಂದನಿಗೇ ॥ ಮಂಗಲಂ ॥ ೨ ॥ ಮಂಗಲಂ ಭಕ್ತರ ಪೊರೆವಗೋವಿಂದಗೆ । ಮಂಗಲಂ ಪಾಪ ವಿದೂರನಿಗೇ । ಮಂಗಲಂ ಮನು ಮುನಿವಂದ್ಯ ವಿಶ್ವೇಶಗೇ । ಮಂಗಲಂ ಮುನಿಪುರ ಶ್ರೀಕೃಷ್ಣನಿಗೇ ॥ ಮಂಗಲಂ । ಮಂಗಲಂ ॥ ೩ ॥

ಸಂಧಿ ೧ಕ್ಕಂ ಪದ್ಯ ೯೧೬ ಕ್ಕಂ ಮಂಗಳ ಮಸ್ತು.

ಶುಭಂ ಭದ್ರಂ ಮಂಗಳಂ.

| | | | |
|---|---|---|---|
| 1. | ಅಮೋಘವರ್ಷ ನೃಪತುಂಗ | — | ಮಾನ್ಯಖೇಟದ ಸಾಮ್ರಾಟ |
| 2. | ಅಕಾಲವರ್ಷ ಕೃಷ್ಣ | — | ನೃಪತುಂಗನ ಮಗ |
| 3. | ಚಂದ್ರಲೆ | — | ನೃಪತುಂಗನ ಮಗಳು |
| 4. | ಪಾತಾಳ ಮಲ್ಲ | — | ಮಂತ್ರಿ |
| 5. | ಬಂಕೇಶ | — | ಸೇನಾಪತಿ |
| 6. | ಲೋಕಾದಿತ್ಯ | — | ಸೇನಾಪತಿಯ ಮಗ |
| 7. | ಜಿನಸೇನ | — | ರಾಜ ಗುರು |
| 8. | ನೃಪತುಂಗನ ಚಾರಕರು | — | — |
| 9. | ನಂದಿವರ್ಮ | — | ಕಾಂಚೀ ಪಲ್ಲವ ರಾಜ (ನೃಪತುಂಗನ ಅಳಿಯ) |
| 10. | ವಿಜಯಾದಿತ್ಯ | — | ಚಾಲುಕ್ಯರಾಜ (ಮಾಂಡಲಿಕ) |
| 11. | ಮಿಹಿರ ಭೋಜ | — | ಕನ್ಯಾಕುಬ್ಜದೇಶದ ರಾಜ } |
| 12. | ಗುಣಶೇಖರ | — | ಮಂತ್ರಿ } |
| 13. | ಮಕರಂದ | — | ಸೇನಾಧಿಪತಿ |
| 14. | ನೀತಿಮಾರ್ಗ | — | ತಲವನಪುರದ ರಾಜ |
| 15. | ಭೂತುಂಗ | — | ಮಗ |
| 16. | ಮತಿವಂತ | — | ಮಂತ್ರಿ |
| 17. | ಪರಮೇಶ | — | ಸೇನಾಧಿಪತಿ |
| 18. | ಶಂಕರ ಗಣ | — | ಚೇದೀ ರಾಜ } |
| 19. | ಕನಕಾಂಗಿ | — | ತಂಗಿ } |
| 20. | ಮಂಗಿ | — | ನೊಳಂಬ ರಾಜ |
| 21. | ಪದ್ಮಲೆ | — | ವೇಶ್ಯೆ } |
| 22. | ವಿಶಾಲಿನಿ | — | ಮಗಳು } |